# ನಾದನೂಪುರ ವಂಡಾರು
# Nadanoopura Vandaru

ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/



ದುಬೈ ನ ಆಜ್ಮನ್ ನಲ್ಲಿ ನಡೆದ ಪಾಪಣ್ಣ ವಿಜಯ ಪ್ರಸಂಗದ ದೃಶ್ಯ

ಪರಿವಿಡಿ
ಬೋರ್ಡ್ ರೂಮ್
ಸಂಪಾದಕೀಯ
ಕನ್ನಡ ಭಾಷೆಗೆ ಯಕ್ಷಗಾನದ ಕೊಡುಗೆ
ಯಕ್ಷಗಾನದಲ್ಲಿ ಕನ್ನಡ ಭಾಷೆ
2023ರ ಕ.ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು
ಬಡಗಿನ ಪುಂಡು ವೇಷಧಾರಿ–ಬೆಲ್ತೂರು ರಮೇಶ್
ಯಕ್ಷಗಾನದ ದಂತಕಥೆ ಪೆರುವೋಡಿ ನಾರಾಯಣ ಭಟ್
ಧೀರ ಕಲೆಯೊಳಗೆ ಕೀರವಾಣಿಯರು–18
ವರದಾ ಮಧುಸೂದನ ಐತಾಳ್
ಅಗರಿ ಶ್ರೀನಿವಾಸ ಭಾಗವತರ ಪ್ರಸಂಗಗಳು
ಸ್ತ್ರೀವೇಷ, ಹಾಸ್ಯ ವೇಷಗಳ ಪ್ರಾತ್ಯಕ್ಷಿಕೆ ಸಹಾಯದ ನಿರೀಕ್ಷೆಯಲ್ಲಿ ಯಕ್ಷಗುರು ಕೋಲೆಕಾಡಿ
ಯಕ್ಷಾವ್ಯಾಸಂ ವಾರ್ಷಿಕೋತ್ಸವ

## ತಿಂಗಳ ಹೈಲೈಟ್ಸ್

**ಲೀಲಾವತಿ ಬೈಪಾಡಿತ್ತಾಯ, ಆಗೋಳಿಡು ಮೋಹನ್ ದಾಸ್ ಶೆಣೈ ಗೆ 2023ರ ಕ. ರಾಜ್ಯೋತ್ಸವ ಪ್ರಶಸ್ತಿ**

**ಶ್ರೀ ಮಂದಾರ್ತಿ ಮೇಳದ ಐತಿಹಾಸಿಕ ದಾಖಲೆ – ದುಬೈ ಮತ್ತು ಬೆಂಗಳೂರಿನ ಪ್ರದರ್ಶನಗಳು**

**ಇತರ ಪ್ರಕಾರಗಳಿಗಿಂತ ಭಿನ್ನ ಸಾಹಿತ್ಯ – ಯಕ್ಷಗಾನ ಪ್ರಸಂಗಗಳು**

**ಸಂಪತ್ಭರಿತ ಕನ್ನಡ ಭಾಷೆಯ ಮಡಿಲು–ಯಕ್ಷಗಾನ**

**ಜನಮನ್ನಣೆ ಪಡೆದ ಪುಂಡು ವೇಷಧಾರಿ– ಬೆಲ್ತೂರು ರಮೇಶ್**

**ಪ್ರಸಂಗ ಸಾಹಿತ್ಯದ ದಿಗ್ಗಜ – ಅಗರಿ ಶ್ರೀನಿವಾಸ ಭಾಗವತ**

### ಬೋರ್ಡ್ ರೂಂ

**ಆತ್ಮೀಯರೆ,**

*ಯಕ್ಷಗಾನ ಕಲಾ ಪ್ರೇಮಿಗಳಿಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ಅಂತೆಯೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಯಕ್ಷಗಾನ ಕಲಾವಿದರಿಗೆ ಹಾರ್ದಿಕ ಅಭಿನಂದನೆಗಳು.*

ಕನ್ನಡಮ್ಮನ ಮಗಳು ಈ ಯಕ್ಷಗಾನ ಕಲೆ. ಈ ಮಾತು ಯಾಕೆಂದರೆ ಯಕ್ಷಗಾನದ ಹುಟ್ಟೇ ಕರುನಾಡಿನಲ್ಲಿ. ಕನ್ನಡ ಭಾಷೆಯ ಸೊಂಪು ಸೊಗಡು ಇನ್ನೂ ಉಳಿದಿರುವುದು ಯಕ್ಷಗಾನದಲ್ಲೇ. ಕರಾವಳಿ ಜಿಲ್ಲೆಗಳಲ್ಲಿರುವ ನೂರಾರು ಮೇಳಗಳು ಒಂದು ದೊಡ್ಡ ಸಮುದಾಯಕ್ಕೆ ವ್ಯವಹಾರವೂ ಆಗಿದೆ. ಉದ್ಯೋಗವನ್ನೂ ನೀಡಿದೆ. ಯಕ್ಷಗಾನವನ್ನೇ ಬದುಕಿನ ಕಾಯಕವಾಗಿ ಸ್ವೀಕರಿಸಿರುವ ಕಲಾವಿದರಿಗೆ ಜೀವನ ಮಾತ್ರವಲ್ಲ ಜೊತೆಗೆ ಕೀರ್ತಿ ಹಾಗೂ ಅಭಿಮಾನಿಗಳನ್ನೂ ನೀಡಿದೆ. ಅದೆಷ್ಟೋ ಕಲಾವಿದರನ್ನು ಕಲೆ ಅನ್ಯ ದೇಶಗಳಿಗೆ ಅನ್ಯ ರಾಜ್ಯಗಳಿಗೆ ಕರೆಸಿಕೊಂಡು ವಿಶ್ವ ದರ್ಶನ ಮಾಡಿಸಿದೆ. ಮಂದಾರ್ತಿ ಮೇಳದ ಕಲಾವಿದನಾಗಿ ದುಬೈ ಪ್ರವಾಸದ ಬಗೆಗಿನ ನನ್ನ ಅನುಭವವನ್ನು ಇಲ್ಲಿ ಹಂಚಿಕೊಳ್ಳಬಯಸುತ್ತೇನೆ. ಸಂತೋಷದ ವಿಷಯವೆಂದರೆ ಒಂದು ಕ್ಷೇತ್ರದ ಮೇಳ ವಿದೇಶಕ್ಕೆ ಹೋಗಿ ಪ್ರದರ್ಶನ ನೀಡುತ್ತಿರುವುದು ಇದೇ ಮೊದಲು. ಇದೊಂದು ಐತಿಹಾಸಿಕ ಕ್ಷಣ/ದಾಖಲೆ ಎಂದೇ ಪರಿಗಣಿಸಬಹುದು. ಮಂದಾರ್ತಿ ಮೇಳವನ್ನೇ ದುಬೈ ನಗರಿಗೆ ಕರೆಸಿ ಪ್ರದರ್ಶನದ ವ್ಯವಸ್ಥೆ ಮಾಡಿರುವುದು ಕಲಾಭಿಮಾನಿಗಳಿಗೆ ಮೇಳದ ಮೇಲಿರುವ ಅಭಿಮಾನದ ಪ್ರತೀಕವಾಗಿದೆ. ಧನಂಜಯ ಶೆಟ್ಟಿ ಹಾಗೂ ಅಶೋಕ್ ಕುಂದರ್, ರವಿ ಶೆಟ್ಟಿ ಅವರ ಮುತಾಲಿಕೆಯಲ್ಲಿ ಈ ಸಾಹಸ ಸಾಧ್ಯವಾಗಿದೆ. ಇದುವರೆಗೆ ಕಲಾವಿದರ ತಂಡಗಳು, ಖಾಸಗಿ ಗುಂಪುಗಳು, ಆಯ್ದ ಕಲಾವಿದರು ರಾಷ್ಟ್ರದ ನಾನಾ ಭಾಗಗಳಲ್ಲಿ ಹೋಗಿ ಅನೇಕ ಪ್ರದರ್ಶನಗಳನ್ನು ನೀಡಿದ್ದಾರೆ. ಆದರೆ ಒಂದು ಕ್ಷೇತ್ರದ ಮೇಳ ಪ್ರವಾಸ ಹೋಗಿದ್ದು ಮಂದಾರ್ತಿ ಕ್ಷೇತ್ರಕ್ಕೆ ಸಂದ ಗೌರವ. ಈ ಪ್ರದರ್ಶನದಲ್ಲಿ ಮೇಳದ ಯುವ ಕಲಾವಿದರಿಗೆ ಅವಕಾಶ ನೀಡಿ ವಿದೇಶದಲ್ಲಿ ಶ್ರೀ ಮಂದಾರ್ತಿ ಮೇಳ ಜೈತ್ರ ಯಾತ್ರೆ ನಡೆಸಿ ಬಂದಿದೆ. ಯುಎಇ ನ ಹ್ಯಾಬಿಟೇಟ್ ಸ್ಕೂಲ್, ಆಲ್–ತಜಾ, ಅಜ್‌ಮನ್ ನಲ್ಲಿ ಅಕ್ಟೋಬರ್ 29ರ ಭಾನುವಾರದಂದು ಗುಣಸುಂದರಿ ಪಾಪಣ್ಣ ವಿಜಯ ಎಂಬ ಪ್ರಸಂಗವನ್ನು ಮೇಳದ ಕಲಾವಿದರು ಪ್ರದರ್ಶಿಸಿದ್ದೇವೆ. ಗಲ್ಫ್ ನ ನಮ್ಮ ಕುಂದಾಪುರ ಕನ್ನಡ ಬಳಗ ತಂಡವು ಕುಂದಗನ್ನಡ ಉತ್ಸವದ ಅಂಗವಾಗಿ ಆಯೋಜಿಸಿದ್ದ ಈ ಪ್ರದರ್ಶನದಲ್ಲಿ ಮಂದಾರ್ತಿ ಮೇಳದ ಕಲಾವಿದರುಗಳಾದ **ನಾಗೇಶ್ ಕುಲಾಲ್, ಶ್ರೀಧರ ಭಂಡಾರಿ, ಶ್ರೀಕಾಂತ್ ಶೆಟ್ಟಿ ಹಿಮ್ಮೇಳದಲ್ಲಿ ಹಾಗೂ ಮುಮ್ಮೇಳದಲ್ಲಿ ಅಜ್ರಿ ಗೋಪಾಲ್ ಗಾಣಿಗ, ತುಂಬ್ರಿ ಭಾಸ್ಕರ್, ಕಡಬ ಪೂವಪ್ಪ, ಪ್ರಕಾಶ್ ಕಿರಾಡಿ, ಗುಂಡಿಬೈಲು ಗಣಪತಿ ಭಟ್, ಗೋವಿಂದ ವಂಡಾರು, ಅಕ್ಷಯ ಶಿರಿಯಾರ ಆನಂದ ಮರಕಾಲ** ಭಾಗವಹಿಸಿದ್ದರು. ಕ್ಷೇತ್ರದ ಮೇಳವನ್ನು ದುಬೈ ಕನ್ನಡಿಗರು ಅತ್ಯಂತ ಗೌರವಾದರಗಳಿಂದ ಬರಮಾಡಿಕೊಂಡರು. ಕ್ಷೇತ್ರದ ಮೇಳ ಎಂಬ ಕಾರಣಕ್ಕಾಗಿಯೇ ಪ್ರದರ್ಶನಕ್ಕೆ ಬಂದಿದ್ದ ಪ್ರೇಕ್ಷಕರ ಸಂಖ್ಯೆಯೂ ದೊಡ್ಡದಾಗಿತ್ತು. ಪ್ರದರ್ಶನಕ್ಕೆ ತೆರಳಿದ್ದ ಕಲಾವಿದರನ್ನು ದುಬೈನ ಬುರ್ಜ್ ಖಲೀಫಾ ಮೊದಲಾದ ಪ್ರಮುಖ ವೀಕ್ಷಣಾ ಸ್ಥಳಗಳಿಗೆ ಕರೆದೊಯ್ದಿದ್ದರು.



ಗೋವಿಂದ ವಂಡಾರು

ತೈಲ ರಾಷ್ಟ್ರದಲ್ಲಿ ಗುಣಸುಂದರಿಯಂಥ ಸತ್ವಯುತ ಕಥೆ ಪ್ರದರ್ಶನ ಕಂಡಿರುವುದು ಹೆಮ್ಮೆಯ ಸಂಗತಿಯೇ. ಇದು ಸುಮಾರು 1965ರ ಆಸುಪಾಸಿನಲ್ಲಿ ರಚಿಸಲ್ಪಟ್ಟ ಪ್ರಸಂಗ. ಮೊದಲು ಸುರತ್ಕಲ್ ಮೇಳದಲ್ಲಿ ಅದ್ಭುತ ಪ್ರದರ್ಶನ ಕಂಡು ಇಂದಿಗೂ ಜೀವಂತವಾಗಿರುವ ಪ್ರಸಂಗ. ಈ ಪ್ರಸಂಗವು ಗಟ್ಟಿ ಪಾತ್ರಗಳಿಂದ, ಪ್ರತಿ ಸನ್ನಿವೇಷಗಳಿಗೂ ಇರುವ ಮಹತ್ವ, ಕಥೆ ಹೇಳುವ ಸಂದೇಶ ಯಾವ ಪುರಾಣದ ಕತೆಗಳಿಗೂ ಕಡಿಮೆಯಿಲ್ಲ ಎಂದೆನಿಸಿದೆ. ಈ ಪ್ರಸಂಗ ಕಾಲ್ಪನಿಕವಾದರೂ ಸಾರ್ವಕಾಲಿಕ ಮೌಲ್ಯವುಳ್ಳದ್ದು. ತುಂಬ ಹಳೆಯ ಪ್ರಸಂಗವಾದರೂ ಇದರಲ್ಲಿರುವ ಪಾತ್ರಗಳನ್ನು ಒಬ್ಬೊಬ್ಬ ಕಲಾವಿದ ಕಟ್ಟಿಕೊಟ್ಟ ರೀತಿ ವಿಭಿನ್ನವೇ. ನಾನು ನಿರ್ವಹಿಸಿದ ಗುಣಸುಂದರಿಯ ಪಾತ್ರವಂತೂ ಸುಮಾರು ಜನ ಕಲಾವಿದರಿಂದ ನಿರ್ವಹಿಸಲ್ಪಟ್ಟಿದೆ. ಹಾಗಾಗಿ ಈ ಪಾತ್ರವನ್ನು ಯಾರೇ ನಿರ್ವಹಿಸಬೇಕಾದರೂ ಜವಾಬ್ದಾರಿಯಿಂದ ನಿರ್ವಹಿಸಬೇಕಾಗುತ್ತದೆ. ಕಲಾವಿದನಿಗೆ ಇಷ್ಟವಾಗುವ ಪಾತ್ರಗಳಲ್ಲಿ ಜೊತೆಗೆ ನನ್ನಿಷ್ಟದ ಪಾತ್ರಗಳಲ್ಲಿ ಇದೂ ಒಂದು. ಮೊದಲ ಬಾರಿಗೆ ನಾನು ಯುಎಇ ನಲ್ಲಿ ಗುಣಸುಂದರಿ ಪಾತ್ರದಲ್ಲಿ ಕಾಣಿಸಿಕೊಂಡೆ.

ಇದರೊಂದಿಗೆ ಮತ್ತೊಂದು ಐತಿಹಾಸಿಕ ಪ್ರದರ್ಶನಕ್ಕೆ ಶ್ರೀ ಮಂದಾರ್ತಿ ಮೇಳ ಸಜ್ಜಾಗಿದೆ. ಇದೇ ಮೊದಲ ಬಾರಿಗೆ ಜಯರಾಮ್ ಶೆಟ್ಟಿಯವರ ಸಂಯೋಜನೆಯಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನವಂಬರ್ 11 ಶನಿವಾರದಂದು ಮಂದಾರ್ತಿ ಕ್ಷೇತ್ರ ಮಹಾತ್ಮೆಯನ್ನು ಬೆಂಗಳೂರಿಗರಿಗೆ ಪ್ರದರ್ಶಿಸಲಿದ್ದು ಇದೂ ಒಂದು ಇತಿಹಾಸ ನಿರ್ಮಿಸುವ ಪ್ರದರ್ಶನ ಎನ್ನಬಹುದು. ಈ ಎರಡೂ ಐತಿಹಾಸಿಕ ಪ್ರದರ್ಶನಗಳಲ್ಲಿ ನಾನು ಮೇಳದ ಕಲಾವಿದನಾಗಿರುವುದು ಹೆಮ್ಮೆಯ ಸಂಗತಿ. ಮೇಳ ಮತ್ತು ಕಲಾವಿದರನ್ನು ಅಭಿಮಾನದಿಂದ ಗುರುತಿಸುವ ಪೋಷಕರಿರುವುದು ಯಕ್ಷಗಾನ ರಂಗಕ್ಕೆ ಬಲ ಹಾಗೂ ಕಲೆಯ ಗುಣವೂ ಹೌದು. ನಿಮ್ಮೆಲ್ಲರ ಅಭಿಮಾನಕ್ಕೆ ನಾನು ಋಣಿ. ***ನಿಮ್ಮವನೆ, ಗೋವಿಂದ ವಂಡಾರು***

---

## ಸಂಪಾದಕೀಯ

**ಕರ್ನಾಟಕದ ಸಮಸ್ತ ಜನತೆಗೆ 68ನೆಯ ಕನ್ನಡ ರಾಜ್ಯೋತ್ಸವದ ಶುಭಾಶಯಗಳು**

ಕನ್ನಡ ಭಾಷೆಯ ಸೌಂದರ್ಯ, ಶ್ರೀಮಂತಿಕೆಗೆ ಹಿಡಿದ ಕೈಗನ್ನಡಿ ಎಂದರೆ ಈ ನಾಡಿನ ಕಲೆ ಮತ್ತು ಸಾಹಿತ್ಯಗಳು. ಕಥೆ, ಕವನ, ಕಾದಂಬರಿ, ಪ್ರಬಂಧ, ಅನುವಾದ, ಜಾನಪದ, ಹಾಗೂ ಇನ್ನಿತರ ಪ್ರಕಾರದ ಸಾಹಿತ್ಯಗಳು ಸಾಹಿತ್ಯ ಲೋಕದಲ್ಲಿ ಮೆರೆದಷ್ಟು ಯಕ್ಷಗಾನ ಸಾಹಿತ್ಯಗಳು ಜನರನ್ನು ಅಷ್ಟಾಗಿ ತಲುಪಿಲ್ಲ. ಈ ಸಾಹಿತ್ಯ, ಪ್ರದರ್ಶನ ಪ್ರಕಾರವಾಗಿ ಉಳಿದಿದೆಯಷ್ಟೆ ಹೊರತು ಓದಿನ ಅಭಿರುಚಿಯನ್ನು ಹೆಚ್ಚಿಸುವಂತಹಾ ಪ್ರಕಾರವಾಗಿಲ್ಲ. ಯಕ್ಷಗಾನ ಸಾಹಿತ್ಯವನ್ನು ಓದುವವರೂ ಕಡಿಮೆ. ಅರ್ಥ ಮಾಡಿಕೊಳ್ಳುವವರೂ ಕಡಿಮೆ. ಯಕ್ಷಗಾನ ಪ್ರಸಂಗದ ಶೈಲಿ, ವೈಶಿಷ್ಟ್ಯತೆ, ಛಂದೋಬಂಧಗಳು, ಅಲಂಕಾರ, ಕಾವ್ಯ ಸೌಂದರ್ಯ, ಕಥಾ ತಾತ್ಪರ್ಯ, ವಿಶೇಷತೆಗಳು ಸಾಹಿತ್ಯಾಸಕ್ತರ ಓದುಗರ ಗಮನವನ್ನು ಇನ್ನೂ ಸೆಳೆದಿಲ್ಲ. ಹಾಗಾದರೆ ಯಕ್ಷಗಾನ ಸಾಹಿತ್ಯ ಯಶಸ್ವಿಯಾಗುವುದು ಹೇಗೆ? ಹೇಗೆಂದರೆ, ಅದು ಪ್ರದರ್ಶನ ರೂಪ ಪಡೆದುಕೊಂಡಾಗ. ವಿದ್ವಾಂಸರ ಅಭಿಪ್ರಾಯದ ಪ್ರಕಾರ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಪುರಾಣಾಧಾರಿತ ಯಕ್ಷಗಾನ ಪ್ರಸಂಗ ಸಾಹಿತ್ಯ ರಚನೆಯಾಗಿವೆ, ಅಸಂಖ್ಯ ಪ್ರದರ್ಶನಗಳನ್ನು ಕಂಡಿವೆ. ಆ ಮಟ್ಟಿಗೆ ಕನ್ನಡ ಭಾಷೆ, ಸಾಹಿತ್ಯಕ್ಕೆ ಯಕ್ಷಗಾನ ಪ್ರಸಂಗ ಸಾಹಿತ್ಯ ದೊಡ್ಡ ಕೊಡುಗೆ ಎನ್ನಬಹುದು. ಪ್ರಸಂಗದ ವಿಚಾರಕ್ಕೆ ಬಂದಾಗ ಪುರಾಣ ಹಾಗೂ ಕಾಲ್ಪನಿಕ ಎಂಬ ಭಿನ್ನತೆಯಿಂದ ಪ್ರತ್ಯೇಕಿಸುವುದಿದೆ. ಇಲ್ಲೂ ಪುರಾಣದ ಕೃತಿಗಳಿಗೆ ಮೌಲ್ಯ ಹೆಚ್ಚು ಎಂಬ ಸಾರ್ವತ್ರಿಕ ಅಭಿಪ್ರಾಯವಿದೆ. ಆದರೆ ಸಾಹಿತ್ಯದ ಜೀವಂತಿಕೆ ಇರೋದು ಸೃಜನಶೀಲತೆಯಲ್ಲಿ. ಪುರಾಣದ ಕಥೆಗಳನ್ನು ಯಕ್ಷಗಾನ ರೂಪಕ್ಕಿಳಿಸೋದು ಸೃಜನಶೀಲತೆಯೇ. ಹಾಗೆಂದು ಕಾಲ್ಪನಿಕ ಪ್ರಸಂಗವನ್ನು ನಗಣ್ಯ ಮಾಡೋದು ಸಾಹಿತ್ಯ ಲೋಕಕ್ಕೆ ಮಾಡುವಂತಹಾ ದೊಡ್ಡ ನಷ್ಟ ಎನ್ನಬಹುದು. ಕಾಲ್ಪನಿಕ ಕಥೆಗಳಲ್ಲಿ ಕಥೆ, ಪದ್ಯ ಸಾಹಿತ್ಯ, ದೃಶ್ಯಜೋಡಣೆ, ಸಂದೇಶ, ಮೌಲ್ಯ, ನೀತಿ ಪಾಠಗಳು, ಬದುಕಿನ ಅನುಭವಗಳು, ಪ್ರತಿಯೊಬ್ಬ ಕವಿಯ ಲೋಕದರ್ಶನ ಎಲ್ಲದರಲ್ಲೂ ಸೃಜನಶೀಲತೆಯನ್ನು ಗುರುತಿಸಬಹುದು. ಇಂತಹ ಪ್ರಸಂಗಗಳು ರಂಗಕ್ಕೆ ಬಂದಾಗ ಅಲ್ಲಿ ಕಲಾವಿದ ಪ್ರಸ್ತುತ ಪಡಿಸುವ ರೀತಿ, ಆತನ ಅನುಭವಗಳೂ ಜೋಡಣೆಯಾಗುತ್ತವೆ. ಇನ್ನೇನು ಮೇಳಗಳು ತಿರುಗಾಟವನ್ನು ಪ್ರಾರಂಭ ಮಾಡೋವಂಥ ಸಮಯ ಬಂದಿದೆ. ಪ್ರತಿವರ್ಷ ಏನಿಲ್ಲವೆಂದರೂ 50–60 ಕಾಲ್ಪನಿಕ ಪ್ರಸಂಗಗಳು ರಚನೆಯಾಗಿ ಮೇಳಗಳ ಪಟ್ಟಿಯಲ್ಲಿ ಪ್ರಕಟವಾಗೋದನ್ನು ನೋಡಿದ್ದೇವೆ. ಆದರೆ ಈ ಪ್ರಸಂಗಗಳಲ್ಲಿ 90 ಶೇಕಡಾದಷ್ಟು ಪ್ರಸಂಗಗಳ ದಾಖಲೆಯೇ ಕಣ್ಮರೆಯಾಗುತ್ತವೆ. ಕೆಲವೊಂದು ಮೇಳಗಳಲ್ಲಿ ಕಾಲ್ಪನಿಕ ಪ್ರಸಂಗ ಸಾಹಿತ್ಯ ಮೇಳದ ಮುಖ್ಯಸ್ಥನ ಮನೆಯಲ್ಲಿ ಇರುತ್ತದೆ. ಅದನ್ನು ಹೆಮ್ಮೆಯಿಂದ ಪ್ರಕಟಿಸುವಂತಹ ಕೆಲಸಗಳು ನಡೆದಿರೋದು ಕಡಿಮೆ. ಕಲಾವಿದರ ಅನಿಸಿಕೆಯ ಪ್ರಕಾರವೂ ಕಲಾವಿದನ ಪ್ರತಿಭಾ ಪ್ರದರ್ಶನಕ್ಕೆ, ಹೊಸತನ ಪ್ರದರ್ಶಿಸಲು ಅವಕಾಶ ಒದಗಿಸುವುದು ಕಾಲ್ಪನಿಕ ಪ್ರಸಂಗಗಳೇ. ಪೌರಾಣಿಕ ಪಾತ್ರಗಳಲ್ಲಿ ಈಗಾಗಲೇ ಹೀಗೇ ಇರಬೇಕೆಂಬ ಚೌಕಟ್ಟು ಹಿರಿಯ ಕಲಾವಿದರು ಹಾಕಿಕೊಟ್ಟ ದಾರಿ ಇರುತ್ತದೆ. ಪ್ರತಿ ಕಲಾವಿದನ ಪ್ರಸ್ತುತಿಯಲ್ಲಿ ಭಿನ್ನತೆಗಳಿದ್ದರೂ ಹೆಚ್ಚು ಕಡಿಮೆ ಹೆಚ್ಚಿನ ಸನ್ನಿವೇಶಗಳು ಪುನರಾವರ್ತನೆಯೇ ಆಗಿರುತ್ತದೆ. ಕಾಲ್ಪನಿಕ ಪ್ರಸಂಗದ ಪಾತ್ರಗಳಲ್ಲಿ ಕವಿಯ ಕಲ್ಪನೆ ಮಾತ್ರವಲ್ಲ, ಕಲಾವಿದನಿಗೂ ತಮ್ಮ ಕಲ್ಪನೆಯ ಮೂಲಕ ಪಾತ್ರಗಳಿವೆ ಜೀವ ತುಂಬಲು ಅವಕಾಶವಿದೆ. ಇದು ಕಾಲ್ಪನಿಕ ಪ್ರಸಂಗಗಳು ಹೆಚ್ಚುಗಾರಿಕೆ ಹಾಗೂ ಉತ್ತಮ ಅಂಶ.

ಆದರೆ ಕಾಲ್ಪನಿಕ ಪ್ರಸಂಗಗಳು ಮೌಲ್ಯ ಗಳಿಸಿಕೊಳ್ಳದೇ ಇರೋದಕ್ಕೆ ಕೆಲವೊಂದು ಪ್ರಧಾನ ಅಂಶಗಳನ್ನೂ ಗುರುತಿಸಬಹುದು. ಕಡಿಮೆ ಗುಣಮಟ್ಟದ ಸಾಹಿತ್ಯ, ಕೀಳು ಮನರಂಜನೆ, ಅಧ್ಯಯನ, ಪೂರ್ವತಯಾರಿ ಇಲ್ಲದೆ, ಬದ್ಧತೆ ಇಲ್ಲದೆ ಬರೆಯುವಂತಹ ಪ್ರವೃತ್ತಿ, ಪ್ರದರ್ಶನದಲ್ಲಿ ಕಂಡುಬರದ ಶಿಸ್ತು, ವ್ಯಾವಹಾರಿಕ ಲಾಭಕ್ಕಾಗಿ ಬೇಕಾದಂತೆ ಪ್ರದರ್ಶನ ನೀಡುವ ಸ್ವೇಚ್ಛೆ, ಕಥೆಗಾರನ ಆಶಯ ಒಂದು ರೀತಿಯದಾಗಿರುವುದು ಅದನ್ನು ಕಲಾವಿದರೂ ಮತ್ತೊಂದು ರೀತಿಯಾಗಿ ಮಾರ್ಪಡಿಸುವುದು, ಹಳೆಯ ಪ್ರಸಂಗಗಳ ಹೆಸರು ಕಾಪಿ ಮಾಡುವುದು ಪದ್ಯಗಳನ್ನು ಸ್ವಲ್ಪ ಸಾಹಿತ್ಯ ಬದಲಾವಣೆ ಮಾಡಿ ಸ್ವಂತ ರಚನೆ ಎಂಬಂತೆ ಬಳಸಿಕೊಳ್ಳುವುದು, ಬೇರೆ ಪ್ರಸಂಗದ ಕಥೆಯನ್ನು ಕದಿಯೋದು ಈ ಎಲ್ಲಾ ಕಾರಣಗಳಿಂದ ಕಾಲ್ಪನಿಕ ಪ್ರಸಂಗಗಳು ಒಬ್ಬ ಕವಿಯ ಸ್ವಂತ ರಚನೆ ಅಲ್ಲ ಎಂಬ ಅಭಿಪ್ರಾಯವನ್ನು ಹುಟ್ಟು ಹಾಕುತ್ತದೆ. ಅಲ್ಲದೆ ಸಾಹಿತ್ಯಿಕ ಮೌಲ್ಯವನ್ನು ಪಡೆದುಕೊಳ್ಳದಿರಲೂ ಕಾರಣವೂ ಆಗಿರಬಹುದು.

ನೈಜವಾಗಿ ಒಬ್ಬ ಕವಿಯ ಪ್ರತಿಭೆಯಿಂದ ರಚಿಸಲ್ಪಟ್ಟ ಕಾಲ್ಪನಿಕ ಪ್ರಸಂಗಗಳು ಸ್ವತಂತ್ರ ರಚನೆಗಳು. ಇಲ್ಲಿ ಬರಹಗಾರನ ಕಲ್ಪನಾ ಲೋಕವಿದೆ. ಕಥೆ ಹೆಣೆಯುವ ತಂತ್ರಗಾರಿಕೆ ಇದೆ. ಪದ್ಯ ರಚಿಸುವ ಕಾವ್ಯಾತ್ಮಕ ಪ್ರತಿಭೆಯಿದೆ. ಯಕ್ಷಗಾನ ಪ್ರಸಂಗಕರ್ತ ಕೇವಲ ಕಥೆಗಾರನಲ್ಲ, ಕೇವಲ ಕವಿಯೂ ಅಲ್ಲ, ಆತ ಸಮರ್ಥ ಕಥೆಗಾರ, ಕವಿ, ರಂಗ ತಂತ್ರವನ್ನು ಸೂಕ್ಷ್ಮವಾಗಿ ಅವಲೋಕಿಸಬಲ್ಲ, ರಂಗ ಕರ್ಮಿಗಳ ಸಾಮರ್ಥ್ಯದ ಪರಿಚಯವುಳ್ಳ ವಿಮರ್ಶಕನೂ ಆಗಿರಬೇಕಾಗುತ್ತದೆ. ಏಕೆನೆ ಯಕ್ಷಗಾನ

ಕೇವಲ ನಾಟಕವಲ್ಲ, ಹಾಡುಗಬ್ಬವೂ ಅಲ್ಲ, ಚರ್ಚಾಕೂಟವೂ ಅಲ್ಲ. ನಾಟ್ಯ ಪ್ರದರ್ಶನವೂ ಅಲ್ಲ. ಇವೆಲ್ಲ ಒಟ್ಟಾಗಿ ಒಂದು ವಿಶೇಷ ರೂಪಿನ ಕಲೆ.
ಪೌರಾಣಿಕ ಪ್ರಸಂಗಗಳಲ್ಲಿ ಆಶಯ ಕೆಡಿಸದಂತೆ ಪ್ರದರ್ಶನ ಹೇಗೆ ಸಾಧ್ಯವಾಗುತ್ತದೋ ಅಂತಹದೇ ಬದ್ಧತೆ ಕಾಲ್ಪನಿಕ ಪ್ರಸಂಗಗಳಲ್ಲೂ ಇರಬೇಕು. ಕಾಲ್ಪನಿಕ ಪ್ರಸಂಗಗಳು ಕೇವಲ ಆರು ತಿಂಗಳ ಪ್ರದರ್ಶನಕ್ಕಷ್ಟೇ ಸೀಮಿತವಾಗದೆ ಸಾಹಿತ್ಯ ಭಂಡಾರಗಳಾಗಿ ಉಳಿದುಕೊಳ್ಳಬೇಕು. ಈಗಂತೂ ಭಾಷೆನ್ನು ಶ್ರೀಮಂತಗೊಳಿಸುವ, ಬೆಳೆಸುವ ಅವಕಾಶ ಯಕ್ಷಗಾನದಲ್ಲಿ ವಿಪುಲವಾಗಿದೆ. ಮೌಲ್ಯ ಅರ್ಥಗಳನ್ನು ಗರ್ಭೀಕರಿಸಿಕೊಂಡ ಹಾಡುಗಳನ್ನು ಸಂಭಾಷಣೆಯ ಮೂಲಕ ಸರಳೀಕರಣಗೊಳಿಸುವುದೂ ಭಾಷಾ ಶ್ರೀಮಂತಿಕೆಯನ್ನು ತೋರಿಸುವುದಾಗಿದೆ.
ಯಕ್ಷಗಾನ ದಕ್ಷಿಣ ಕರ್ನಾಟಕದ ಕೆಲ ಜಿಲ್ಲೆಗಳಿಗಷ್ಟೇ ಸೀಮಿತವಾಗದೆ, ಯಕ್ಷಗಾನದ ರುಚಿಯನ್ನು ಇತರರಿಗೂ ತಿಳಿಸಲು ಅವಕಾಶವಿದೆ. ರೂಪಕಗಳು, ಕಿರು ಯಕ್ಷಗಾನ ಪ್ರಹಸನಗಳು ಈ ನಿಟ್ಟಿನಲ್ಲಿ ಕೆಲಸ ಮಾಡಬಲ್ಲವು.
ಕವಿ ಹಾಗೂ ಕಥೆಗಾರ ಈ ಎರಡರ ಪ್ರತಿಭೆಯೂ ಮಿಳಿತವಾಗಿ ಮೂಡಿ ಬರುವ ಕಾಲ್ಪನಿಕ ಯಕ್ಷಗಾನ ಪ್ರಸಂಗಗಳು ನಿಜಕ್ಕೂ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಕಾಣಿಕೆ. ಆದರೆ ಶಿಸ್ತಿನ ಚೌಕಟ್ಟಿನಲ್ಲಿ ಬಂದಾಗ, ಪ್ರಾಮಾಣಿಕವಾಗಿ ಸಾಹಿತ್ಯ ಕೃಷಿ ಮಾಡುವಂಥವರ ಅವಶ್ಯಕತೆಯಿದೆ. ಕನ್ನಡ ರಾಜ್ಯೋತ್ಸವದ ಹಿನ್ನಲೆಯಲ್ಲಿ ಮೌಲ್ಯಯುತ ಕಾಲ್ಪನಿಕ ಪ್ರಸಂಗ ಸಾಹಿತ್ಯ ಬರೆದಿರುವ ಕವಿಗಳನ್ನು ಅಭಿನಂದಿಸೋಣ.. – ***ಶುಭಾಶಯ, ಸಂಪಾದಕರು***

---

# ಕನ್ನಡ ಭಾಷೆಗೆ ಯಕ್ಷಗಾನದ ಕೊಡುಗೆ



ಕನ್ನಡ ಭಾಷೆ ಬಹಳ ಶ್ರೀಮಂತವಾದದ್ದು. ಇದರ ಸಾಹಿತ್ಯ ಸಮೃದ್ಧತೆ ಇಂತಿಷ್ಟೇ ಎನ್ನುವುದಕ್ಕಾಗುವುದಿಲ್ಲ. ಪಂಪ ಪೂರ್ವ ಯುಗದಿಂದಾರಂಭಿಸಿ ಇವತ್ತಿನವರೆಗೆ ಕನ್ನಡದಲ್ಲಿ ಬಂದ ಸಾಹಿತ್ಯ ಕೃತಿಗಳೆಷ್ಟೋ. ಅವು ಅಸಂಖ್ಯ. ಕೆಲವು ಗಣನೆಗೆ ಬರುತ್ತವೆ. ಕೆಲವು ಹೆಸರಿಲ್ಲದೇ ಅಳಿದು ಹೋಗುತ್ತವೆ. ಆದರೆ ಯಕ್ಷಗಾನ ಕನ್ನಡ ಭಾಷೆಗೆ ಕೊಟ್ಟ ಕೊಡುಗೆಯನ್ನು ಘನ ವಿದ್ವಾಂಸರು ವಿಶೇಷ ಆಸ್ಥೆ ವಹಿಸಿ ಗಮನಿಸದಿರುವುದು ವಿಷಾದನೀಯ.

ಯಕ್ಷಗಾನವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಎಂದಲ್ಲ. ಆದರೂ ಯಕ್ಷಗಾನದ ಕೊಡುಗೆ ಅಷ್ಟು ಗಮನಕ್ಕೆ ಬಂದಿಲ್ಲ ಎನ್ನುವುದಂತೂ ಸತ್ಯ. ಕನ್ನಡ ಭಾಷಾ ಸಾಹಿತ್ಯ ಚರಿತ್ರೆಯನ್ನು ಗಮನಿಸುವಾಗಲೂ ಯಕ್ಷಗಾನ ಅಲ್ಲೇನೂ ಎದ್ದು ಕಾಣುವುದಿಲ್ಲ. ಕನ್ನಡ ಭಾಷೆಯನ್ನು ಯಕ್ಷಗಾನ ಎಂಬ ಕಲಾಪ್ರಕಾರ ಬೆಳೆಸುವಷ್ಟು ಬೇರೊಂದು ಕಲಾಪ್ರಕಾರ ಬೆಳೆಸಿರಲಿಕ್ಕಿಲ್ಲ. ಕನ್ನಡವನ್ನು ಮಾತಿನ ಮೂಲಕವೂ, ಸಾಹಿತ್ಯದ ಮೂಲಕವೂ ಯಕ್ಷಗಾನ ಕ್ಷೇತ್ರ ಬಹಳಷ್ಟು ಎತ್ತರಕ್ಕೇರಿಸಿದೆ.
ಅದು ಹೇಗೆ ಎಂಬುವುದನ್ನು ಗಮನಿಸುವುದಾದರೆ–
***ಯಕ್ಷಗಾನ ಪ್ರಸಂಗ ಸಾಹಿತ್ಯ*** – ಹಿಂದೆ ಕನ್ನಡ ಸಾಹಿತ್ಯದಲ್ಲಿ ಯಕ್ಷಗಾನ ಸಾಹಿತ್ಯ ಬಹಳಷ್ಟು ಅವಜ್ಞೆಗೆ ಒಳಗಾದದ್ದರ ಬಗ್ಗೆ ಡಾ. ಕಬ್ಬಿನಾಲೆ ವಸಂತ ಭಾರಧ್ವಾಜರ ಕೃತಿ "ಯಕ್ಷಗಾನ ಸಾಹಿತ್ಯ ಚರಿತ್ರೆಯ"ಯ ಮುನ್ನುಡಿಯೆಂಬ ಪರಿಚಯ – ವಿಮರ್ಶೆಯಲ್ಲಿ ಪಾದೆಕಲ್ಲು ವಿಷ್ಣು ಭಟ್ಟರು ಹೀಗೆ ಹೇಳುತ್ತಾರೆ – ಕನ್ನಡ ಅಧ್ಯಯನ ಕ್ಷೇತ್ರದಲ್ಲಿ ಯಕ್ಷಗಾನ ಸಾಹಿತ್ಯದ ಅಧ್ಯಯನವೆಂಬುದು ಬಹಳ ಕಾಲ ಅವಜ್ಞೆಗೋ ಉಪೇಕ್ಷೆಗೋ ಒಳಗಾಗಿತ್ತು. ಕನ್ನಡ ಅಧ್ಯಯನ ಕ್ಷೇತ್ರವು ಹೊಸ ಹುರುಪನ್ನು ಪಡೆದ ಆಧುನಿಕ ಕಾಲದಲ್ಲೇ ಇದು ನಡೆದುದಾಗಿದೆ. ಆದರೆ ಇತ್ತೀಚೆಯ ದಿನಗಳಲ್ಲಿ ಯಕ್ಷಗಾನ ಸಾಹಿತ್ಯವು ಕನ್ನಡ ಸಾಹಿತ್ಯದ ಒಂದು ಅಂಗವೆಂದೂ, ಕನ್ನಡದ ಅಧ್ಯಯನ ಕ್ಷೇತ್ರವು ಯಕ್ಷಗಾನ ಸಾಹಿತ್ಯದ ಅಧ್ಯಯನವನ್ನೊಳಗೊಲದಿದ್ದರೆ ಅಪೂರ್ಣವೇ ಆಗಿ ಉಳಿಯುವುದೆಂದೂ ತಿಳಿವು ಮೂಡುತ್ತಲಿದೆ. ಯಕ್ಷಗಾನದ ವಿವಿಧ ಮುಖಗಳ ಅಧ್ಯಯನವು ಗಂಭೀರವಾಗಿ ನಡೆಯತೊಡಗಿದೆ. ಯಕ್ಷಗಾನ ಕ್ಷೇತ್ರದಲ್ಲಿ ಪರಿಶ್ರಮವುಳ್ಳ ವಿದ್ವಾಂಸರು ಬಹಳ ವರ್ಷಗಳಿಂದ ಯಕ್ಷಗಾನ ಸಾಹಿತ್ಯದ ಅವಗಣನೆಯಾಗುತ್ತಿದ್ದುದನ್ನು ಎತ್ತಿಹೇಳಿ ಕನ್ನಡದ ಸಾಹಿತ್ಯ ವಲಯದೊಳಗೆ ಯಕ್ಷಗಾನ ಸಾಹಿತ್ಯವು ಸ್ಥಾನ ಪಡೆಯಬೇಕಾದುದು ನ್ಯಾಯವೆಂದು ಪ್ರತಿಪಾದಿಸುತ್ತಾ ಬಂದರು." ಮುಂದುವರಿದು...." ಆದರೆ ಈ ಅವಗಣನೆಯನ್ನು ಪರಿಹರಿಸಲೆಂಬಂತೆ ಬೆಂಗಳೂರು ವಿಶ್ವಿದ್ಯಾನಿಲಯದವರು ತಮ್ಮ "ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ"ಯ ಸಂಪುಟಗಳಲ್ಲಿ ಯಕ್ಷಗಾನ ಸಾಹಿತ್ಯಕ್ಕೆ ಮಾನ್ಯತೆ ನೀಡಿರುವುದು ಸಮಾಧಾನಕರವಾಗಿದೆ."

ಈ ಪ್ರೋತ್ಸಾಹ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಯಕ್ಷಗಾನಕ್ಕೆ ಸಿಕ್ಕರೆ ಮುಂದೊಂದು ದಿನ ಅದರ ಸಮೃದ್ಧತೆ ಎಷ್ಟಿದೆ ಎನ್ನುವುದು ಎಲ್ಲರ ಅರಿವಿಗೆ ಬರುತ್ತದೆ. ಯಕ್ಷಗಾನವೆನ್ನುವುದು ವಿಸಿಷ್ಟ ಸಾಹಿತ್ಯ ಪ್ರಕಾರ ಎನ್ನುವುದನ್ನು ಜನಮಾನಸಕ್ಕೆ ತಿಳಿಸುವ ಸಲುವಾಗಿ "ಯಕ್ಷಗಾನ ಸಾಹಿತ್ಯ ಚರಿತ್ರೆ"ಯನ್ನು ಬರೆದರು. ಇನ್ನು ಯಕ್ಷಗಾನದ ಛಂದಸ್ಸಿನ ಮಹತ್ವವನ್ನು ಎಲ್ಲರಿಗೆ ತಿಳಿಸಿದವರು ದಿ. ಛಂದೋಬ್ರಹ್ಮ ಶಿಮಂತೂರು ನಾರಾಯಣ ಶೆಟ್ಟರು ಹಾಗೂ ಅವರ ಶಿಷ್ಯರಾದ ಶ್ರೀ ಗಣೇಶ್ ಕೊಲೆಕಾಡಿಯವರು. ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಶ್ರೀಮಂತವನ್ನಾಗಿಸಿದ ಅನೇಕ ಪ್ರಸಂಗಕರ್ತರು ನಮ್ಮಲ್ಲಿದ್ದಾರೆ. ಯಕ್ಷಗಾನ ಸಾಹಿತ್ಯದ ಕಾವ್ಯ ಸೊಗಸು, ಬಳಸಲ್ಪಡುವ ಛಂದೋರೂಪಗಳು, ರೂಪಕದ ಪರಿಕಲ್ಪನೆಯ ಪ್ರಸಂಗಗಳು ಎಲ್ಲವುಗಳ ಸೊಗ ಅನುಭವಿಸಿದವನಿಷ್ಟೇ ಅರ್ಥವಾದೀತು.
ಯಕ್ಷಗಾನದ ಕುರಿತಾದ ಲೇಖನಗಳು – ಯಕ್ಷಗಾನ ಕಲೆಯ ಕುರಿತಾಗಿ ಬರುವ ಲೇಖನಗಳು ಒಂದು ದಾಖಲೀಕರಣ ಎನ್ನುವುದರ ಜೊತೆಗೆ ಕನ್ನಡ ಸಾಹಿತ್ಯಕ್ಕೆ ಒಂದು ರೀತಿಯ ಕೊಡುಗೆಯೂ ಹೌದು. ಲೇಖನಗಳಷ್ಟೇ ಅಲ್ಲ, ಪಿ.ಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಅನೇಕ ಪ್ರೌಢ ಪ್ರಬಂಧಗಳಿರಬಹುದು ಇವೆಲ್ಲವುಗಳಿಗೆ ಮಾನ್ಯತೆ ವಿಶ್ವವಿದ್ಯಾನಿಲಯಗಳ ಮಾನ್ಯತೆ ಸಿಕ್ಕಿರುವುದು ಸಂತಸದ ವಿಚಾರವೇ.
***ಯಕ್ಷಗಾನದ ಮಾತುಗಾರಿಕೆ–*** ಅದು ಯಕ್ಷಗಾನ ಪ್ರದರ್ಶನದ ಮಾತುಗಾರಿಕೆ ಇರಬಹುದು ಅಥವಾ ತಾಳಮದ್ದಳೆ ಕೂಟದ ವಾಕ್ಪಟುತ್ವವಿರಬಹುದು ಅದರಲ್ಲಿ ಕನ್ನಡ ಭಾಷೆಯ ಸೊಗಸು ಕಲಾರಸಿಕರಿಗೆ ಮುದವನ್ನೀಯುತ್ತದೆ. ಯಕ್ಷಗಾನ ಬಯಲಾಟಗಳಲ್ಲಿ ಮಾತುಗಾರಿಗೆ ಹೆಚ್ಚಿನ ಪ್ರಾಧಾನ್ಯತೆ ಇರದಿದ್ದರೂ ಅಲ್ಲಿ

ಕಲಾವಿದನ ಚಿಕ್ಕದಾದ ಚೊಕ್ಕದಾದ ಸಂಭಾಷಣೆಗಳ ಚಂದವೇ ಬೇರೆ. ಭಾಗವತರ ಪದ್ಯದ ಸಾರವನ್ನು ಅಭಿನಯ ಹಾಗೂ ವಾಕ್ಪಟುತ್ವದ ಮೂಲಕ ಕಲಾರಸಿಕನಿಗೆ ದಾಟಿಸುವುದಿದೆಯಲ್ಲಾ ಅದು ಒಂದು ತೆರನಾದ ರಸಸ್ಫೂರ್ತಿ.

ತಾಳಮದ್ದಳೆಯನ್ನು ಮನಸಾ ಆಸ್ವಾದಿಸಬೇಕು ಕಲಾವಿದನ ವಾಗ್ಝರಿಯ ಪ್ರವಾಹದ ಅರಿವಾಗಬೇಕಾದರೆ. ಅಲ್ಲಿ ಅರ್ಥಧಾರಿಯೋರ್ವನ ಅರ್ಥಗಾರಿಕೆಯ ಶೈಲಿ, ಆತನಲ್ಲಿ ಸ್ಫುರಿಸುವ ಶಬ್ದಭಂಡಾರ, ಆತ ನೀಡುವ ಶಬ್ದಾರ್ಥಗಳು, ಆತ ಶಬ್ದಗಳನ್ನು ತುಂಡರಿಸುವ ರೀತಿ ಇವೆಲ್ಲವೂ ಕನ್ನಡ ಭಾಷೆಯ ಸೌಂದರ್ಯವನ್ನು ಹೇಳುತ್ತವೆ.

ಹೀಗೆ ಒಟ್ಟಾರೆಯಾಗಿ ಕನ್ನಡ ಬಾಷೆಗೆ ಯಕ್ಷಗಾನದ ಕೊಡುಗೆ ಅಪಾರ. ಅದನ್ನರಿತುಕೊಂಡು ಮುಂದುವರಿದರೆ ಎಲ್ಲವೂ ಉತ್ತಮ ಫಲವನ್ನು ಕೊಟ್ಟೀತು. ಯಕ್ಷಗಾನ ಬೆಳೆಯುವುದರ ಜೊತೆಗೆ ಕನ್ನಡ ಭಾಷೆಯೂ ಉನ್ನತಿಯನ್ನು ಕಂಡೀತು.

***ಲೇಖಕರು– ಸಾಯಿ ಸುಮಾ ಎಂ ನಾವುಡ***

---

## ಯಕ್ಷಗಾನದಲ್ಲಿ ಕನ್ನಡ ಭಾಷೆ

ಕರ್ನಾಟಕದ ಭಾಷೆ ಕನ್ನಡ. ಕರ್ನಾಟಕದ ಕಲೆ ಯಕ್ಷಗಾನ. ಇದು ಪ್ರಶ್ನಾತೀತ ವಿಷಯ. ಆದರೆ ಕರಾವಳಿಯ ಕಲೆ ಯಕ್ಷಗಾನ ಎನ್ನುವವರಿದ್ದಾರೆ. ಇದು ತಪ್ಪು. ಘಟ್ಟ ಪ್ರದೇಶಗಳಲ್ಲಿ ಅಂದರೆ ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶತಮಾನಗಳ ಹಿಂದೆಯೇ ಯಕ್ಷಗಾನ ಇತ್ತು ಎನ್ನುವುದರ ಬಗ್ಗೆ ಸರಿಯಾದ ಆಧಾರವಿದೆ. ಲಕ್ಷ್ಮೀಶ, ಪ್ರಾರ್ತಿ ಸುಬ್ಬರಂತೆ ನೂರಾರು ಪ್ರಸಂಗ ಬರೆದವರು ತೀರ್ಥಹಳ್ಳಿ ಸಮೀಪದ ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳು. ತೆಂಕು ಬಡಗಿನ ಪ್ರಚಲಿತ ಪ್ರಸಂಗಗಳಲ್ಲಿ ಹೆಚ್ಚಿನವು ನರಸಿಂಹ ಶಾಸ್ತ್ರಿಗಳದ್ದೇ.. ಮರು ಮಾತಿಲ್ಲ. ಇನ್ನು ಕನ್ನಡವನ್ನು ಶುದ್ಧ ರೀತಿಯಲ್ಲಿ ಬಳಸುವುದು ಯಕ್ಷಗಾನದಲ್ಲಿ ಮಾತ್ರ ಎಂದು ಹೇಳುವವರಿದ್ದಾರೆ. ಇದು ಸರಿ. ಆದರೆ ಮಾತೃಭಾಷೆ ಎನಿಸಿಕೊಂಡ ಸಂಸ್ಕೃತ ಅರ್ಥಗಾರಿಕೆಯಲ್ಲಿ ಕೆಲವೇ ಶಬ್ದಗಳು ನುಸುಳಿಕೊಂಡುದುಂಟು. ಆದರೆ ಇದು ತಪ್ಪಲ್ಲ. ಪಂಚ ದ್ರಾವಿಡ ಭಾಷೆಗಳಾದ ಕನ್ನಡ, ತುಳು, ಮಲಯಾಳ, ತಮಿಳು, ತೆಲುಗು ಈ ಐದು ಭಾಷೆಗಳಲ್ಲಿ ಸಂಸ್ಕೃತ ಶಬ್ದಗಳು ಹಾಸು ಹೊಕ್ಕಾಗಿ ಸೇರಿಕೊಂಡಿರುವುದು ಹೆಚ್ಚಿನವರಿಗೆ ತಿಳಿದೇ ಇದೆ. ಭಾಗವತರು ಹಾಡುವ ಪದ್ಯಗಳಲ್ಲಿ ಹಳೆಗನ್ನಡ ನಡುಗನ್ನಡ ಮತ್ತು ಸಂಸ್ಕೃತ ಮಿಶ್ರ ವಾಗಿರುತ್ತದೆ ಜನರಿಗೆ ಅದನ್ನು ಸ್ಪಷ್ಟೀಕರಿಸಲು ಇರುವುದೇ ಅರ್ಥ. ಇನ್ನು ಕೆಲವರು ಅರ್ಥ ಹೇಳುವಾಗ ಕನ್ನಡಕ್ಕಿಂತ ಸಂಸ್ಕೃತ ಶಬ್ದಗಳೇ ಶಬ್ದಗಳೇ ಹೆಚ್ಚಾಗಿ ಇರುತ್ತದೆ ಇದು ಸರಿಯಲ್ಲ. ಜನಸಾಮಾನ್ಯರಿಗೆ ಹೃದಯ ತಟ್ಟಿ ಮನಸ್ಸನ್ನು ಮುಟ್ಟಲು ಆಗುವುದಿಲ್ಲ. ಸರಳವಾದ ಕನ್ನಡದಲ್ಲಿ ಪದ್ಯದ ಅರ್ಥ ಹೇಳಿದರೆ ಪಂಡಿತರು ಒಪ್ಪುತ್ತಾರೆ. ಸಾಮಾನ್ಯರು ಸಂತೋಷ ಪಡುತ್ತಾರೆ. ಸುಮಾರು 50 ವರ್ಷಗಳ ಹಿಂದೆ ಭಾಗವತರು ಇನ್ನೂರಕ್ಕೂ ಹೆಚ್ಚು ಪದ್ಯಗಳನ್ನು ಹಾಡುತ್ತಿದ್ದರು. ಈಗ ನೂರಕ್ಕೂ ಕಡಿಮೆ ಪದ್ಯಗಳನ್ನು ಸಾಕಾಗುತ್ತದೆ. ನೂರಾ ಹದಿನೈದರವರೆಗೆ ಹೋಗಬಹುದು. ಹೀಗೆ ಯಾಕೆ ಅಂದರೆ ಆ ಕಾಲದ ಕಲಾವಿದರು ಪದ್ಯದ ಸರಳ ಅನುವಾದ ಮಾಡುತ್ತಿದ್ದರಷ್ಟೇ. ಈಗಿನ ಅರ್ಥದಾರಿಗಳು ವಿದ್ವಾಂಸರು ಪದ್ಯದ ಶಬ್ದಾರ್ಥ ಭಾವಾರ್ಥ ಎಂದು ವಿಸ್ತರಿಸಿ ಮಾತನಾಡುವುದರಿಂದ ಸಮಯ ಜಾರಿ ಹೋಗುತ್ತದೆ. ಪದ್ಯಗಳು ಕಡಿಮೆ ಸಾಕಾಗುತ್ತದೆ. ಶುದ್ಧ ಕನ್ನಡ ಯಕ್ಷಗಾನದಲ್ಲಿ ಮಾತ್ರ ಎಂಬುದು ಪೌರಾಣಿಕ ಪ್ರಸಂಗಗಳಿಗೆ ಸೀಮಿತ ಎನ್ನಬಹುದು. ಯಾಕೆಂದರೆ ಕಾಲ್ಪನಿಕ, ಐತಿಹಾಸಿಕ ಪ್ರಸಂಗಗಳಲ್ಲಿ ಆಂಗ್ಲ ಭಾಷೆ, ಹಿಂದಿ ಬೆರಕೆಯಾಗುವುದು ಸಾಮಾನ್ಯವಾಗಿ ಬಿಟ್ಟಿದೆ. ಪುರಾಣ ಪ್ರಜ್ಞೆ ಜಾಗೃತಗೊಳಿಸುವಲ್ಲಿ ಯಕ್ಷಗಾನ ಸುಲಭ ಮಾಧ್ಯಮ. ಅದು ಪರಿವರ್ತನೆಗೊಂಡು ಈಗ ಇಂಗ್ಲೀಷ್ ನಲ್ಲಿ ಹಿಂದಿಯಲ್ಲಿ ಕೊಂಕಣಿಯಲ್ಲೂ ಹವ್ಯಕ ಭಾಷೆಯಲ್ಲೂ ಮಲಯಾಳದಲ್ಲೂ ಯಕ್ಷಗಾನ ಪ್ರದರ್ಶನ ನಡೆಯುತ್ತದೆ. ನನ್ನ ಅನಿಸಿಕೆಯಂತೆ ಯಕ್ಷಗಾನವು ಪುರಾಣಕ್ಕೆ ಸೀಮಿತವಾಗಿದ್ದ ಕಾಲಕ್ಕೆ ಶುದ್ಧ ಕನ್ನಡ ಯಕ್ಷಗಾನದಲ್ಲಿತ್ತು. ಈಗ ನಮ್ಮ ಆಡು ಭಾಷೆ ಕನ್ನಡವೇ ಆದರೂ ಸಮಯ ಎಷ್ಟು ಎಂದು ಕೇಳೋದಿಲ್ಲ ಟೈಮ್ ಎಷ್ಟು ಎಂದೇ ಕೇಳುವುದು ವಾಡಿಕೆಯಾಗಿಬಿಟ್ಟಿದೆ. ಆ ಮಟ್ಟಿಗೆ ಕನ್ನಡ ಉಳಿದಿದ್ದರೆ ಯಕ್ಷಗಾನದಲ್ಲಿ ಮಾತ್ರ ಎನ್ನಬಹುದು. ಇದಕ್ಕೆ ಅಪವಾದ ಕಲಾವಿದರು ಇರಬಹುದು, ಇಲ್ಲಿ ಅದು ಅಪ್ರಸ್ತುತ ಅಲ್ಲವೇ.

***ಲೇಖಕರು– ಎಂ ಕೆ ರಮೇಶ ಆಚಾರ್***

---

## 2023ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು

ಕರ್ನಾಟಕ ಸರ್ಕಾರ ಕೊಡಮಾಡುವ 2023 ರ ಸಾಲಿನ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಯಕ್ಷಗಾನ ಕ್ಷೇತ್ರದಿಂದ ಶ್ರೀಮತಿ ಲೀಲಾವತಿ ಬೈಪಡಿತ್ತಾಯ ಮತ್ತು ಅರ್ಗೋಡು ಮೋಹನದಾಸ ಶೆಣೈ, ಉಡುಪಿ ಭಾಜನರಾಗಿದ್ದಾರೆ.



ಶ್ರೀಮತಿ ಲೀಲಾವತಿ ಬೈಪಡಿತ್ತಾಯರು ಯಕ್ಷಗಾನದಲ್ಲಿ 40 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ವೃತ್ತಿಪರ ಯಕ್ಷಗಾನ ಮೇಳಗಳಲ್ಲಿ ತಿರುಗಾಟ ಮಾಡಿದ ಏಕೈಕ ಮಹಿಳೆಯೂ ಹೌದು. ಇವರ ಪತಿ ಹರಿನಾರಾಯಣ ಬೈಪಾಡಿತ್ತಾಯರೂ ತೆಂಕುತಿಟ್ಟಿನ ಅಗ್ರಮಾನ್ಯ ಹಿಮ್ಮೇಳ ಗುರುಗಳಾದ್ದಾರೆ. ಇವರ ತಂದೆ ಪುಂಡರೀಕಾಕ್ಷ ಹೆಬ್ಬಾರ್ ಮತ್ತು ತಾಯಿ ಮಹಾಲಕ್ಷ್ಮಿ. ಬಾಲ್ಯದಲ್ಲಿ ಸಂಗೀತವನ್ನು ಕಲಿತಿದ್ದ ಇವರು ಪತಿಯ ಪ್ರೋತ್ಸಾಹದಿಂದ ಯಕ್ಷಗಾನ ರಂಗಕ್ಕೆ ಭಾಗವತೆಯಾಗಿ ಪಾದಾರ್ಪಣೆ ಮಾಡುತ್ತಾರೆ. ಸುಬ್ರಹ್ಮಣ್ಯ, ಪುತ್ತೂರು, ಕದ್ರಿ, ಕರ್ನಾಟಕ, ಅರುವ (ಅಳದಂಗಡಿ), ಕುಂಬಳೆ ಬಪ್ಪನಾಡು ಮೇಳ, ಕುಂಬಳೆ, ತಲಕಳ ಮುಂತಾದ ಡೇರೆ–ಬಯಲಾಟ



ಮೇಳಗಳಲ್ಲಿ ನಿರಂತರ ಇಪ್ಪತ್ತು ವರ್ಷಗಳ ಕಾಲ ವೃತ್ತಿ ಕಲಾವಿದರಾಗಿಯೂ 17ಕ್ಕೂ ಹೆಚ್ಚು ವರ್ಷಗಳಿಂದ ಅತಿಥಿ ಕಲಾವಿದರಾಗಿಯೂ ಯಕ್ಷಗಾನಕ್ಕೆ ಸೇವೆ ಸಲ್ಲಿಸಿದ್ದಾರೆ.

ಯಕ್ಷಗಾನದ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ ಕುಂದಾಪುರ ತಾಲೂಕಿನ ಕಮಲಶಿಲೆಯ ಆರ್ಗೋಡು ಮೋಹನದಾಸ ಶೆಣೈರವರು ವೇಷಧಾರಿಯಾಗಿ ವೃತ್ತಿಪರ ಮೇಳಗಳಲ್ಲಿ 42 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಇವರ ತಂದೆ ಆರ್ಗೋಡು ಗೋವಿಂದರಾಯ್ ಶೆಣೈ ಹಾಗು ತಾಯಿ ಮುಕ್ತಭಾಯಿ. ದಶರಥ, ಭೀಮ, ರಾಮ, ಪರಶುರಾಮ, ಶಂತನು, ದೇವವ್ರತ, ಉಗ್ರಸೇನ, ನಳ, ಭೀಮ, ನರಕಾಸುರ, ಹನುಮಂತ, ಕಮಲಭೂಪ, ವೀರಮಣಿ, ವಲಲ, ನಳ, ಬಾಹುಕ, ಶುಂಭ, ದುಷ್ಟಬುದ್ಧಿ ರುಕ್ಮಅಂಗದ, ಜಮದಗ್ನಿ ಹರಿಶ್ಚಂದ್ರ ಮೊದಲಾದ ಪಾತ್ರಗಳು ಪ್ರಸಿದ್ದಿ ಪಡೆದಿವೆ. ಬೆಳ್ಳಿ ನಕ್ಷತ್ರ, ಶಿವ ಭೈರವಿ, ವರ್ಣ ನಕ್ಷತ್ರ, ಸೇರಿದಂತೆ ಹಲವಾರು ಪ್ರಸಂಗಗಳಿಗೆ ಪದ್ಯ ರಚನೆ ಮಾಡಿದ ಹಿರಿಮೆಯೂ ಇವರದು.

ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಬಡಗು ತಿಟ್ಟಿನ ಹಿರಿಯ ಕಲಾವಿದರಾದ ಉಪ್ಪುಂದ ನಾಗೇಂದ್ರ ರಾವ್, ಅಜ್ರಿ ಗೋಪಾಲ ಗಾಣಿಗ, ಬುಕ್ಕಿಗುಡ್ಡೆ ಮಹಾಬಲ ನಾಯಕ್ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಬಪ್ಪನಾಡು ಮೇಳದ ಕಲಾವಿದರಾದ ದಿನೇಶ್ ಶೆಟ್ಟಿಗಾರ ಕೊಡಪದವುರವರು ಭಾಜನರಾಗಿದ್ದಾರೆ.

# ಬಡಗಿನ ಪುಂಡು ವೇಷಧಾರಿ–ಬೆಲ್ಲೂರು ರಮೇಶ್






ಬಡಗುತಿಟ್ಟಿನ ಒಂದು ಪ್ರಭೇಧವಾದ ನಡುತಿಟ್ಟಿನ ಮಟಪಾಡಿ ಸಂಪ್ರದಾಯದ ಅನುಭವಿ ಪುಂಡುವೇಷಧಾರಿಯಾಗಿ ಬೆಲ್ಲೂರು ರಮೇಶರನ್ನು ಯಾವ ಅಂಗದಲ್ಲೂ ಗುರುತಿಸಬಹುದು. ವೇಗದ ಕುಣಿತ, ಖಚಿತವಾದ ಹೆಜ್ಜೆಗಾರಿಕೆ, ಅಪಾರ ಶ್ರುತಿಜ್ಞಾನ, ಆಕರ್ಷಕ ಕುಳ್ಳಗಿನ ಮೈಕಟ್ಟು, ಆಳವಾದ ರಂಗಾನುಭವ, ಅತ್ಯಪೂರ್ವ ಪ್ರತ್ಯುತ್ಪನ್ನತ್ವ, ಸ್ಫುಟವಾದ ಶ್ರುತಿಬದ್ಧ ಮಾತುಗಾರಿಕೆ, ಮನಸೆಳೆಯುವ ಹಾವಭಾವ, ಮೂರನೆಯ ವೇಷಕೊಪ್ಪುವ ಆಳ್ತನದಿಂದ ಬಡಗುತಿಟ್ಟಿನ ಅಗ್ರಮಾನ್ಯ ಕಲಾವಿದನೆಂದು ಗುರುತಿಸಲ್ಪಟ್ಟ ರಮೇಶರು ಅರವತ್ತು ಎಪ್ಪತ್ತರ ದಶಕದಲ್ಲಿ ಯಕ್ಷಗಾನ ವಲಯದಲ್ಲಿ ಮನೆಮಾತಾಗಿದ್ದವರು.

"ಬೆಲ್ಲೂರು" ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರಾದ ರಮೇಶರವರು ಉಡುಪಿ ಜಿಲ್ಲೆ ಕುಂದಾಪುರ ತಾಲೂಕಿನ ಬೆಲ್ಲೂರು ಎಂಬಲ್ಲಿ ರಾಮ ನಾಯ್ಕ ಮತ್ತು ರುಕ್ಕು ದಂಪತಿಯ ಸುಪುತ್ರನಾಗಿ ಜನಿಸಿದರು. ಎಳವೆಯಲ್ಲಿಯೇ ಕಡು ಬಡತನದ ನೋವನ್ನುಂಡು ಬೆಳೆದವರು. ಅತೀವವಾದ ಬಡತನದಲ್ಲೇ ಬಾಲ್ಯದಿಂದಲೇ ಯಕ್ಷಗಾನದ ಗೀಳನ್ನು ಹೊಂದಿದವರು. ಬಡಗುತಿಟ್ಟಿನ ಪ್ರಸಿದ್ಧ ಬಣ್ಣದ ವೇಷಧಾರಿ ಬೆಲ್ಲೂರು ರಾಮ ಬಳೆಗಾರರು ಇದೇ ಪ್ರಾಂತ್ಯದವರಾಗಿದ್ದು ಅವರ ರಾಕ್ಷಸ ವೇಷಗಳ ಘರ್ಜನೆ ಇವರೊಳಗಿನ ಯಕ್ಷಗಾನಾಸಕ್ತಿಯನ್ನು ಚಿಗುರಿಸಿತು. ಕೇವಲ ಐದನೇ ತರಗತಿ ವಿದ್ಯಾಭ್ಯಾಸಕ್ಕೆ ಸೀಮಿತಗೊಳಿಸಿ ರಾಮ ಬಳೆಗಾರರ ಮಳೆಗಾಳದ ಹೂವಿನ ಕೋಲಿನ ಕಲಾವಿದರಾಗಿ ಸೇರಿಕೊಂಡರು. ಬಳಿಕ ಯಕ್ಷಗಾನವನ್ನು ಶಾಸ್ತ್ರೀಯವಾಗಿ ಕಲಿಯುವ ಹಂಬಲ ಜಾಸ್ತಿಯಾಗಿ ಗುರು ವೀರಭದ್ರನಾಯಕ್ ಮತ್ತು ಹೇರಂಜಾಲು ವೆಂಕಟರಮಣ ಗಾಣಿಗರ ಶಿಷ್ಯನಾಗಿ ಸೇರಿಕೊಂಡು ಈ ಈರ್ವರು ಮಹಾನ್ ಗುರುಗಳ ಮಾರ್ಗದರ್ಶನದಿಂದ ಪರಿಪೂರ್ಣ ಕಲಾವಿದರಾಗಿ ಮೂಡಿಬಂದರು. ಹಾಗಾಗಿ ಈಗಲೂ ಸಹ ಬೆಲ್ಲೂರರನ್ನು ವೀರಭದ್ರ ನಾಯಕರ ಅಧಿಕೃತ ಶಿಷ್ಯನೆಂದು ಜನ ಗುರುತಿಸುತ್ತಾರೆ. ವೆಂಕಟರಮಣ ಗಾಣಿಗರು ಹೆಜ್ಜೆ ಗುರುಗಳಾಗಿ ನಾಯಕರು ಮಾತುಗಾರಿಕೆಯನ್ನು ಕಲಿಸಿ ಬೆಲ್ಲೂರರನ್ನು ಸಮರ್ಥ ಕಲಾವಿದರಾಗಿ ರೂಪಿಸಿದರು. ಹೇರಂಜಾಲು ವೆಂಕಟರಮಣ, ವೀರಭದ್ರ ನಾಯಕರಿಂದ ಕಲಿತ ಪರಿಪೂರ್ಣ ಹೆಜ್ಜೆಗಾರಿಕೆಯಿಂದ ಇವರನ್ನು ಮಟ್ಪಾಡಿ ತಿಟ್ಟಿನ ಪ್ರಾತಿನಿಧಿಕ ಕಲಾವಿದನೆಂದು ಗುರುತಿಸಲಾಗಿದೆ.

ತಮ್ಮ ಹದಿನೈದನೇ ವಯಸ್ಸಿನಲ್ಲಿ ಮಾರಣಕಟ್ಟೆ ಮೇಳದಲ್ಲಿ ಗೆಜ್ಜೆ ಕಟ್ಟಿದ ಬೆಲ್ಲೂರರು ಸತತ ಐದು ವರ್ಷ ಅಲ್ಲಿ ತಿರುಗಾಟ ಮಾಡಿ, ಬಳಿಕ ಸಾಲಿಗ್ರಾಮ ಮೇಳ ಸೇರಿದರು. ಅಲ್ಲಿ ಪ್ರಸಿದ್ಧ ಭಾಗವತರಾಗಿದ್ದ ನಾರ್ಣಪ್ಪ ಉಪ್ಪೂರರು, ನೆಬ್ಬೂರು ನಾರಾಯಣ ಭಾಗವತರು, ಮರವಂತೆ ನರಸಿಂಹ ದಾಸರು, ಮರವಂತೆ ಶೀನದಾಸರು, ಮರಿಯಪ್ಪಾಚಾರರು, ಕೊನೆಯ ಒಂದು ವರ್ಷ ಕಾಳಿಂಗ ನಾವಡರು, ಕಲಾವಿದರಾದ ಕೆರೆಮನೆ ಮಹಾಬಲ ಹೆಗಡೆ, ಶಂಭು ಹೆಗಡೆ, ಗಜಾನನ ಹೆಗಡೆ, ಶಿರಿಯಾರ ಮಂಜು ನಾಯ್ಕರು, ಜಲವಳ್ಳಿಯವರು, ನಗರ ಜಗನ್ನಾಥ ಶೆಟ್ಟಿ, ಅರಾಟೆ ಮಂಜುನಾಥ, ಕುಂಜಾಲು ರಾಮಕೃಷ್ಣ, ಹಾರಾಡಿ ಮಹಾಬಲ ಗಾಣಿಗ, ಗುರು ವೀರಭದ್ರ ನಾಯಕ್, ಹೇರಂಜಾಲು ವೆಂಕಟರಮಣ, ಹಳ್ಳಾಡಿ ಮಂಜಯ್ಯ ಶೆಟ್ಟಿ, ಪುಂಡರೀಕಾಕ್ಷ ಉಪಾಧ್ಯಾಯ, ಬಳ್ಕೂರು ಕೃಷ್ಣ ಯಾಜಿ, ಹೊನ್ನಪ್ಪ ಗೋಕರ್ಣ, ಐರೋಡಿ ಗೋವಿಂದಪ್ಪ ಮುಂತಾದ ಕಲಾವಿದರೊಂದಿಗೆ ಪ್ರಸಿದ್ಧ ಪುಂಡು ವೇಷಧಾರಿಯಾಗಿ ಸುಮಾರು ಹತ್ತು ವರ್ಷ ಕಲಾಸೇವೆ ಮಾಡಿದರು. ಆಗ ಸಾಲಿಗ್ರಾಮ ಮೇಳದಲ್ಲಿ ಜಯಭೇರಿ ಬಾರಿಸಿದ "ಸಮಗ್ರಭೀಷ್ಮ" ಪ್ರಸಂಗದಲ್ಲಿನ ಪರ್ವದ ಕೃಷ್ಣ, ಹಾಗೂ ಶಿರಿಯಾರ ಮಂಜುನಾಯಕರ ಅನುಪಸ್ಥಿತಿಯಲ್ಲಿನ ದೇವವ್ರತ, ಮಹಾಸತಿ ಮಂಗಳಾ, ಸತೀಸುಶೀಲೆ, ರಾಜನರ್ತಕಿ, ಚಂದ್ರಹಾಸ ಮುಂತಾದ ಪ್ರಸಂಗಗಳ ವೇಷಗಳು ಅಪಾರ ಜನಮನ್ನಣೆ ಗಳಿಸಿದ್ದವು. ಬಳ್ಕೂರು ಕೃಷ್ಣಯಾಜಿ ಮತ್ತು ಇವರ ಜೋಡಿ ವೇಷಗಳು ಸಹ ಪ್ರಸಿದ್ದವಾಗಿದ್ದವು. ಅದೇ ಸಮಯದಲ್ಲಿ ಡಾ. ಕಾರಂತರ ಪ್ರೋತ್ಸಾಹ ಸೋಮನಾಥ ಹೆಗ್ಡೆಯವರ ಸಹಕಾರದೊಂದಿಗೆ 1979ರಲ್ಲಿ ಪ್ರಥಮ ವಿದೇಶಿ ಯಾತ್ರೆ ಕೈಗೊಳ್ಳಲು ಸಾಧ್ಯವಾಯಿತೆಂದು ಅವರೀರ್ವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಆ ಬಳಿಕ ಮಂದಾರ್ತಿ ಮೇಳ ಸೇರಿದ ಇವರು ಅಲ್ಲಿ ಮತ್ಯಾಡಿ ನರಸಿಂಹ ಶೆಟ್ಟಿ, ಹಾರಾಡಿ ಅಣ್ಣಪ್ಪ ಗಾಣಿಗರ ಹಿಮ್ಮೇಳದಲ್ಲಿ ಕೋಡಿ

ಶಂಕರ ಗಾಣಿಗ, ಮೊಳಹಳ್ಳಿ ಹೆರಿಯ, ಹೆರಂಜಾಲು ಸುಬ್ಬಣ್ಣ ಗಾಣಿಗ, ಮಜ್ಜಿಗೆಬೈಲು ಆನಂದ ಶೆಟ್ಟಿ, ಚಂದ್ರ ಆಚಾರ್, ಕೃಷ್ಣಮೂರ್ತಿ ಆಚಾರ್, ಮುಂತಾದವರ ಒಡನಾಡಿಯಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ. ಜೋಡಾಟದ ಪುಂಡು ವೇಷದ ಹುಲಿಯೆಂದೇ ಗುರುತಿಸಲ್ಪಟ್ಟ ಇವರ ಜೋಡಾಟದ ಅಭಿಮನ್ಯು, ಬಬ್ರುವಾಹನ, ಲವಕುಶ, ಮೈಂದದ್ವಿವಿಜ, ಕೌಂಡ್ಲಿಕ, ವೃಷಸೇನ, ಮೀನಾಕ್ಷಿ ಮಂತ್ರಿ ಮುಂತಾದ ಪಾತ್ರಗಳು ಎದುರಾಳಿಯ ಮೈಯಲ್ಲಿ ಬೆವರಿಳಿಸುವಂತಿತ್ತು. ದೇವಿ ಮಹಾತ್ಮೆಯ ವಿದ್ಯುನ್ಮಾಲಿ, ಚಂಡಮುಂಡ, ರುಕ್ಮಾವತಿ ಕಲ್ಯಾಣದ ಮತ್ತು ರತಿ ಕಲ್ಯಾಣದ ಕೃಷ್ಣ, ಅವರಿಗೆ ಪ್ರಸಿದ್ಧಿಯನ್ನು ತಂದಿತ್ತ ಪಾತ್ರಗಳಾಗಿತ್ತು. ಹತ್ತು ವರ್ಷಗಳ ಹಿಂದೆ ಉಡುಪಿಯ ಯಕ್ಷಗಾನ ಕಲಾರಂಗ ಸಂಯೋಜಿತ ಸುಧಾರಿತ ದೇವಿ ಮಹಾತ್ಮೆಯಲ್ಲಿ ಯುವ ಕಲಾವಿದ ಕೊಳಲಿ ಕೃಷ್ಣನೊಂದಿಗೆ ಅವರು ಅಭಿನಯಿಸಿದ ಮುಂಡಾಸುರನ ಪಾತ್ರ ಅಪಾರ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿತ್ತು. ಕೃಷ್ಣ, ಪ್ರಹ್ಲಾದ, ಪರಶುರಾಮ ಮುಂತಾದ ಪಾತ್ರಗಳಿಂದ ಯಕ್ಷಕಲಾ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಬಲ್ಲ ಸ್ಥಾನಕ್ಕೇರಿದ ರಮೇಶರ ಬಬ್ರುವಾಹನ ಮತ್ತು ಅಭಿಮನ್ಯು ಪಾತ್ರಗಳು ಬಡಗುತಿಟ್ಟಿನ ಹಳೆಯ ಸಂಪ್ರದಾಯದಲ್ಲಿ ದಾಖಲಾದ ಪಾತ್ರಗಳು. ಅಮೃತೇಶ್ವರಿ, ಕಳವಾಡಿ, ಸೌಕೂರು, ಹಾಲಾಡಿ, ಮಡಾಮಕ್ಕಿ, ಬಗ್ವಾಡ್ಲಿ, ಆಜ್ರಿ ಶನೀಶ್ವರ ಮೇಳಗಳಲ್ಲಿ ತಿರುಗಾಟ ಮಾಡಿರುವ ಇವರಿಗೆ ಈಗ ನಿವೃತ್ತಿಯ ವಯಸ್ಸು. ಆದರೂ ತಿರುಗಾಟ ಮಾಡುವ ಅನಿವಾರ್ಯತೆ. ಅನಾರೋಗ್ಯ ಪೀಡಿತರಾಗಿರುವ ಹೆಂಡತಿ, ಮೂವರು ಹೆಣ್ಣು ಮಕ್ಕಳಿರುವ ಅವರ ಸಂಸಾರ ನೌಕೆ ಸಾಗಲು ಈ ವಯಸ್ಸಿನಲ್ಲೂ ಮೇಳದ ತಿರುಗಾಟ ಅನಿವಾರ್ಯ.

ವಿದೇಶಿ ನೆಲದಲ್ಲೂ ರಮೇಶರು ತನ್ನ ಪ್ರತಿಭೆ ಮೆರೆದಿದ್ದಾರೆ. ದಿ. ಬಿ.ವಿ.ಆಚಾರ್ಯರ ಮತ್ತು ಸುಬ್ಬಣ್ಣ ಭಟ್ಟರ ನೇತೃತ್ವದಲ್ಲಿ ಡಾ/ ಮಾರ್ತ ಆಸ್ಟನ್ ಜೊತೆಗೆ 1979ರಲ್ಲಿ ಅಮೇರಿಕದಲ್ಲಿ ಆ ಕಾಲದಲ್ಲಿ ಈ ಕಲೆಗೆ ಮನ್ನಣೆ ಸಿಗುವ ಹಾಗೆ ಮಾಡಿದ್ದರು. ಕೆ.ಎಸ್. ಉಪಾಧ್ಯಾಯರ ಜೊತೆಗೆ ಹಾಂಗ್ ಕಾಂಗ್, ಜೆರ್ಮನಿ, ಕೆನಡ, ಮತ್ತು ಡಾ/ ಲೀಲಾ ಉಪಾದ್ಯಾಯರ ಜೊತೆಗೆ ಫ್ರಾನ್ಸ್, ಜರ್ಮನಿ, ಇಸ್ರೇಲ್, ಹೀಗೆ ಬಡಗುತಿಟ್ಟಿನ ಕಲಾವಿದರಲ್ಲಿ ಇಷ್ಟೊಂದು ಬಾರಿ ವಿದೇಶಿ ಯಾತ್ರೆ ಮಾಡಿ ದಾಖಲೆ ನಿರ್ಮಿಸಿದ್ದಾರೆ. ತನ್ನ ಯಕ್ಷಗಾನ ತಿರುಗಾಟಕ್ಕೆ ಹಿರಿಯ ಕಲಾವಿದರಾದ ವೀರಭದ್ರ ನಾಯಕ್, ವೆಂಕಟರಮಣ ಗಾಣಿಗ, ಬಣ್ಣದ ರಾಮ




ಬಳೆಗಾರ್, ಗುಂಡ್ಮಿ ಬಸವ ನಾಯಕ್, ಶಿರಿಯಾರ ಮಂಜು ನಾಯಕ್, ಕೋಟ ವೈಕುಂಟರವರನ್ನು ಹಾಗೂ ಸಾಲಿಗ್ರಾಮ ಮೇಳದಲ್ಲಿ ತನ್ನ ಉಛ್ರಾಯ ಸ್ಥಿತಿಯಲ್ಲಿ ಮೇಳದ ಯಜಮಾನರಾದ ದಿ. ಪಳ್ಳಿ ಸೋಮನಾಥ ಹೆಗ್ಡೆಯವರನ್ನು ಕೃತಜ್ಞತೆಯಿಂದ ನೆನೆಯುವ ಇವರು ಸರಳ ಸಜ್ಜನ ವ್ಯಕ್ತಿ.ಯಕ್ಷಗಾನವೇ ವೃತ್ತಿ ಪ್ರವೃತ್ತಿಯಾಗಿರುವ, ಹೇಳಿಕೊಳ್ಳುವಂತಹ ಸ್ಥಿತಿವಂತರಲ್ಲದ ಇವರನ್ನು ಅನೇಕ ಸಂಘ ಸಂಸ್ಥೆಗಳು ಗುರುತಿಸಿ ಸನ್ಮಾನಿಸಿವೆ. ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ವೀರಭದ್ರ ನಾಯಕರ ಜನ್ಮಶತಮಾನೋತ್ಸವ, ಸಾಲಿಗ್ರಾಮ ಮೇಳದಿಂದ ನೀಡುವ ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ ಸನ್ಮಾನ ಸಹಿತ ಹಲವಾರು ಸನ್ಮಾನಗಳು ಇವರಿಗೆ ಸಂದಿವೆ.

***ಲೇಖಕರು – ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ.***

---

# ಯಕ್ಷಗಾನದ ದಂತಕತೆ ಪೆರುವೋಡಿ ನಾರಾಯಣ ಭಟ್




ಯಕ್ಷಗಾನದ ದಂತಕತೆ ಎನಿಸಿಕೊಂಡ ಪೆರುವೋಡಿ ನಾರಾಯಣ ಭಟ್ (96) ಅಕ್ಟೋಬರ್ 31 ರಂದು ವಿಧಿವಶರಾಗಿದ್ದಾರೆ. ಯಕ್ಷಗಾನದಲ್ಲಿ "ನಳದಮಯಂತಿ" ಪ್ರಸಂಗದ ಬಾಹುಕ ಹಾಗೂ ಪಾಪಣ್ಣ ವಿಜಯ ಗುಣಸುಂದರಿಯ "ಪಾಪಣ್ಣ" ಪಾತ್ರಕ್ಕೆ ಇವರು ನೀಡಿದ್ದ ಆಯಾಮ ಚಿರಂತನ. ಒಂದು ಶತಮಾನದ ಯಕ್ಷಗಾನ ಚರಿತ್ರೆಯ ಸಾಕ್ಷಿಯಂತೆ ಬದುಕಿದ ಹಾಸ್ಯಗಾರ ಪೆರುವಡಿ ನಾರಾಯಣ ಭಟ್ಟರು ಧರ್ಮಸ್ಥಳ ಮೇಳದಲ್ಲಿ ಕುರಿಯ ವಿಠಲ ಶಾಸ್ತ್ರಿಗಳು, ಅಗರಿ ಶ್ರೀನಿವಾಸ ಭಾಗವತರು ಮೊದಲಾದ ದಿಗ್ಗಜಗಳೊಂದಿಗೆ ಒಡನಾಡಿದವರು. ಪೆರುವೋಡಿ ನಾರಾಯಣ ಭಟ್ಟರಂತೆ ಯಕ್ಷಗಾನದಲ್ಲಿ ಹಾಸ್ಯಪಾತ್ರದಲ್ಲಿ ಭಾಷೆಯನ್ನು ಸೊಗಸಾಗಿ ಬಳಸಿದವರು ವಿರಳವೇ ಎನ್ನಬಹುದು. ಹಾಸ್ಯಗಾರರೆಂದು ಪ್ರಸಿದ್ಧರಾದರೂ ಗಂಭೀರ ಪೋಷಕ ಪಾತ್ರಗಳ ಪ್ರಸ್ತುತಿಗೂ ಅವರು ಹೆಸರಾಗಿದ್ದರು. ಪುತ್ತೂರು ನಾರಾಯಣ ಹೆಗಡೆ, ಎಂಪೆಕಟ್ಟೆ ರಾಮಯ್ಯ ರೆ್ೖಯಂಥವರು, ಹಾರಾಡಿ ರಾಮ ಗಾಣಿಗ, ಕೊಕ್ಕರ್ಣೆ ನರಸಿಂಹ ಕಮ್ತಿ, ಕುರಿಯ ವಿಠಲ ಶಾಸ್ತ್ರಿ, ಅಳಿಕೆ ರಾಮಯ ರೈ, ಕಡಂದೇಲು ಪುರುಷೋತ್ತಮ ಭಟ್ಟ, ಕೋಳ್ಯೂರು ರಾಮಚಂದ್ರ ರಾವ್ ಮೊದಲಾದವರ ಜೊತೆಗೆ ವೇಷ ಮಾಡಿದವರು. ಪೆರುವೋಡಿಯವರ ನಾರದನ ಪಾತ್ರ ಮೆಚ್ಚುಗೆಗೆ ಪಾತ್ರವಾಗಿತ್ತು. ಬಡಗಿನ ಸಾಲಿಗ್ರಾಮ ಮೇಳದಲ್ಲಿ ಗುಂಡ್ಮಿ ಕಾಳಿಂಗ ನಾವಡ, ಚಿಟ್ಟಾಣಿ ರಾಮಚಂದ್ರ ಹೆಗಡೆ ಮೊದಲಾದವರೊಂದಿಗೆ ತಿರುಗಾಟ ನಡೆಸಿದ್ದರು. ಸುರತ್ಕಲ್ ಮೇಳದಲ್ಲಿ ಜಯಭೇರಿ ಭಾರಿಸಿದ್ದ 'ಪಾಪಣ್ಣ ವಿಜಯ'ದ ಪಾಪಣ್ಣನ ಪಾತ್ರದಲ್ಲಿ ಇವರನ್ನು ಮೀರಿಸಿದವರು ಇವತ್ತಿನವರೆಗೂ ಇಲ್ಲ. ಬಾಹುಕನ ಪಾತ್ರಕ್ಕೆ ಹೊಸ ಭಾವನಾತ್ಮಕ ಆಯಾಮವನ್ನು ಕೊಟ್ಟಿದ್ದರು. ಕದ್ರಿ ಮೇಳದಲ್ಲಿ 'ಗೆಜ್ಜೆದ ಪೂಜೆ' ಪ್ರಸಂಗದ ಬೇಚನ ಪಾತ್ರಚಿತ್ರಣ ಇವತ್ತಿಗೂ ಸ್ಮರಣೀಯ. ಬಪ್ಪನಾಡು ಮೇಳದಲ್ಲಿ ರಾಮದಾಸ ಸಾಮಗರ ಕೆ್ೖಲಾಸ ಶಾಸ್ತ್ರಿ ಪಾತ್ರಕ್ಕೆ ಮಾಣಿಯಾಗಿ ಜನಪ್ರಿಯರಾಗಿದ್ದರು. ಪೆರುವೋಡಿ ನಾರಾಯಣ ಭಟ್ಟರ ಆತ್ಮಕಥನವನ್ನು ನಾ. ಕಾರಂತ ಪೆರಾಜೆಯವರು ನಿರೂಪಿಸಿದ್ದು ಅದು ಪ್ರಕಟವಾಗಿದೆ. ಪೆರುವೋಡಿ ನಾರಾಯಣ ಭಟ್ಟರ ನಿಧನದೊಂದಿಗೆ ಯಕ್ಷಗಾನದಲ್ಲಿ 'ಹಾಸ್ಯರಸ'ದ ಘನತೆಯ ಅಭಿವ್ಯಕ್ತಿಯ ಮಾದರಿಯೊಂದು ಮರೆಗೆ ಸರಿದಂತಾಗಿದೆ.

---

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

# ಧೀರ ಕಲೆಯೊಳಗೆ ಕೀರವಾಣಿಯರು – 18



***ಏಕವ್ಯಕ್ತಿ ಯಕ್ಷಗಾನದ ಸಾಧಕಿ – ಶ್ರೀಮತಿ ವರದಾ ಮಧುಸೂದನ ಐತಾಳ್***

ಯಕ್ಷಗಾನ ರಂಗದಲ್ಲಿ ಕಾಣಿಸಿಕೊಳ್ಳುವುದು ಮಹಿಳೆಗೆ ಒಂದರ್ಥದ ಸವಾಲಿನ ಹಾಗೆ. ಅದರಲ್ಲೂ ಪ್ರಯೋಗಾತ್ಮಕ ಪ್ರದರ್ಶನಗಳಲ್ಲಿ ಕಾಣಿಸಿಕೊಳ್ಳುವುದು ಬಹುದೊಡ್ಡ ಸವಾಲು. ಸಾಂಘಿಕ ಪ್ರದರ್ಶನಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡದ್ದಲ್ಲದೇ ಏಕವ್ಯಕ್ತಿ ಯಕ್ಷಗಾನದಲ್ಲಿ ಪ್ರಯೋಗಶೀಲರಾಗಿ ಕಾಣಿಸಿಕೊಂಡವರು ಶ್ರೀಮತಿ ವರದಾ ಮಧುಸೂದನ ಐತಾಳ್ ಅವರು. ಕಲೆಗೆ ಪರಿಧಿಯ ಮಿತಿಯನ್ನು ಮೀರಿದಂತಹದ್ದು. ಕಲಾಮಾತೆಗೆ ಯಾವುದೇ ರೀತಿಯ ಭೇದ–ಭಾವಗಳಿಲ್ಲ. ವಯಸ್ಸಿನ ಮಿತಿಯಿಲ್ಲ. ಬಡವ–ಬಲ್ಲಿದರೆಂಬುದಿಲ್ಲ. ಕಲಾಮಾತೆ ಎಲ್ಲರನ್ನೂ ಕೈಬೀಸಿ ಕರೆದು, ತನ್ನತ್ತ ಸೆಳೆದುಕೊಳ್ಳುತ್ತಾಳೆ, ಬೆಳೆಸುತ್ತಾಳೆ. ಕೊಲ್ಲೂರು ದಿ. ಶಂಕರನಾರಾಯಣ ಭಟ್ ಹಾಗೂ ದಿ. ನಾಗವೇಣಿ ಅಮ್ಮನವರ ಆರು ಮಂದಿ ಮಕ್ಕಳಲ್ಲಿ ಕೊನೆಯವರಾಗಿ 1975, ಜುಲೈ 21 ರಂದು ಜನಿಸಿದ ವರದಾ ಐತಾಳರು, ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಶಾಲೆಯಲ್ಲಿ ಪೂರೈಸಿ, ಸಾಗರದಲ್ಲಿ ಪದವಿಪೂರ್ವ ಶಿಕ್ಷಣವನ್ನು ಪಡೆದರು. ಎಳವೆಯಲ್ಲಿಯೇ ಕಲಾರಾಧನೆಯ ಪೂರಕ ವಾತಾವರಣ ಇವರಿಗೆ ಲಭಿಸಿತ್ತು. ತಂದೆ ವೇಷಧಾರಿಯಾಗಿದ್ದವರು. ದಿ. ವೀರಭದ್ರ ನಾಯಕರ ಸಮಕಾಲೀನರು. ಅಣ್ಣ ದಿ. ರಾಮಚಂದ್ರ ಭಟ್ಟರು ಕಲಾವಿದರಾಗಿ ಮಿಂಚಿದವರು. ಸೋದರಮಾವ ದಿ. ಲಿಂಗದಕೈ ಮಹಾಬಲಯ್ಯನವರು ಆ ಕಾಲದ ಪ್ರಸಿದ್ಧ ಭಾಗವತರಾಗಿದ್ದವರು. ವರದಾರ ಬೆಳವಣಿಗೆಗೆ ಮತ್ತೊಂದು ಪ್ರೇರಣಾತ್ಮಕ ಅಂಶವೆಂದರೆ ಇವರ ಸೋದರತ್ತೆ ದಿ. ಕೊಲ್ಲೂರು ಮಹಾಲಕ್ಷ್ಮಿ ಜೋಯಿಸರು ಯಕ್ಷಗಾನ ಪ್ರಸಂಗಕರ್ತರು ಹಾಗೂ ಕವಯಿತ್ರಿಯಾಗಿ ಗುರುತಿಸಿಕೊಂಡಿದ್ದವರು.



ಎಳವೆಯಲ್ಲಿ ಇಷ್ಟೆಲ್ಲ ಕಲಾಪೂರಕ ವಾತಾವರಣವಿದ್ದರೂ ವರದಾರಿಗೆ ಕಲೆಯನ್ನು ಕಲಿಯಲು ಸಾಧ್ಯವಾಗಿರಲಿಲ್ಲ. ಆವತ್ತಿನ ಮಡಿವಂತಿಕೆಯೂ ಹಾಗೆಯೇ ಇತ್ತೆನ್ನಬಹುದು. 1996 ರಲ್ಲಿ ವೃತ್ತಿಯಲ್ಲಿ ತೆರಿಗೆ ಸಹಾಯಕರಾದ ಶ್ರೀಯುತ ಮಧುಸೂದನ ಐತಾಳರನ್ನು ವಿವಾಹವಾದ ಬಳಿಕ ವರದಾ ಐತಾಳರ ಕಲಾಜೀವನ ಏರು ಸ್ಥಾಯಿಯಲ್ಲಿ ಚಲಿಸಲಾರಂಭಿಸಿತು. ಇವರಲ್ಲಿದ್ದ ಕಲಾಸಕ್ತಿಯನ್ನು ಗಮನಿಸಿದ ಇವರ ಅತ್ತೆ ರತ್ನಾವತೀ ಅಮ್ಮ ಮತ್ತು ಪತಿ ಮಧುಸೂದನ ಐತಾಳರು ತುಂಬು ಮನಸ್ಸಿನಿಂದ ಪ್ರೋತ್ಸಾಹಿಸಿದರು. 1999ರಲ್ಲಿ ನೃತ್ಯಾಭ್ಯಾಸಕ್ಕೆ ಹೆಜ್ಜೆಯಿಟ್ಟರು. ಸೀನಿಯರ್ ವರೆಗಿನ ಅಭ್ಯಾಸವನ್ನು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅನೇಕ ಕಡೆಗಳಲ್ಲಿ ಭರತನಾಟ್ಯ, ನೃತ್ಯರೂಪಕಗಳನ್ನು ಪ್ರದರ್ಶಿಸಿದರು. ಈ ಸಮಯದಲ್ಲಿಯೇ ಶಿವಮೊಗ್ಗದಲ್ಲಿ ಲಕ್ಷ್ಮೀನಾರಾಯಣ ಕಾಶಿ ಇವರ ನೇತೃತ್ವದಲ್ಲಿ "ಜನಶಿಕ್ಷಣ ಸಂಸ್ಥೆ"ಯ ಮೂಲಕ ಎ.ಆರ್.ಗಣಪತಿಯವರಿಂದ ಆರಂಭವಾದ ಮೂರು ತಿಂಗಳ ಯಕ್ಷಗಾನ ತರಬೇತಿ ಶಿಬಿರಕ್ಕೆ ಸೇರಿಕೊಂಡು ಆರಂಭಿಕ ಹೆಜ್ಜೆಗಳನ್ನು ಕಲಿತರು. ತದನಂತರದಲ್ಲಿ ಗುರು ಬನ್ನಂಜೆ ಸಂಜೀವ ಸುವರ್ಣರಿಂದ ಯಕ್ಷಗಾನದ ಹೆಚ್ಚಿನ ಅಭ್ಯಾಸಗಳನ್ನು ಮಾಡಿದರು.

ಭಾಗವತರಾದ ಶ್ರೀ ಕೆ.ಜೆ.ರಾಮರಾವ್ ನೇತೃತ್ವದಲ್ಲಿ ನಡೆದ "ಉಷಾ ಪರಿಣಯ" ಪ್ರಸಂಗದಲ್ಲಿ ಮೊದಲ ಬಾರಿಗೆ ಕಥಾನಾಯಕ ಅನಿರುದ್ಧ ಹಾಗೂ ಅನಿರುದ್ಧನ ತಂದೆ ಪ್ರದ್ಯುಮ್ನ ನ ಪಾತ್ರ, ಈ ಎರಡೂ ಪಾತ್ರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವ ಮೂಲಕ ಯಕ್ಷರಂಗಕ್ಕೆ ಪಾದಾರ್ಪಣೆ ಮಾಡಿದರು. ಆ ಬಳಿಕ ಹಿಂದಿರುಗಿ ನೋಡಲೇ ಇಲ್ಲ. ಆ ಬಳಿಕ ಅನೇಕ ಪ್ರಸಂಗಗಳಲ್ಲಿ ಕೃಷ್ಣ, ಜಾಂಬವ, ಅನಿರುದ್ಧ, ಮನ್ಮಥ, ಧರ್ಮಾಂಗದ, ಬಲರಾಮ, ಹನುಮಂತ, ಬಲಿ, ಅರ್ಜುನ, ಬಭ್ರುವಾಹನ, ಲವ, ಕುಶ, ವಿಷ್ಣು, ವೃಷಸೇನ ಮುಂತಾದ ಪುರುಷ ಪಾತ್ರಗಳಲ್ಲದೇ ಅಂಬೆ, ದೇವಿ, ದಾಕ್ಷಾಯಿಣಿ, ಸತ್ಯಭಾಮೆ, ಸೀತೆ, ಉಲೂಪಿ, ಸುದೇಷ್ಣೆ, ಮಂಡೋದರಿ, ದೇವಯಾನಿ. ಸುಭದ್ರೆ, ಶಶಿಪ್ರಭೆ, ಕಯಾದು ಮೊದಲಾದ ಸ್ತ್ರೀ ಪಾತ್ರಗಳನ್ನು ಕೂಡ ಸಮರ್ಥವಾಗಿ ನಿರ್ವಹಿಸಿದವರು ವರದಾ ಐತಾಳರು. ಜಗದ್ಗುರು ಶಂಕರಾಚಾರ್ಯರ ಬಗೆಗಿನ ಪ್ರಸಂಗದಲ್ಲಿ ಮಹಿಳೆಯರಲ್ಲಿ ಮೊದಲ ಬಾರಿಗೆ ಶಂಕರಾಚಾರ್ಯರ ಪಾತ್ರ ನಿರ್ವಹಣೆ ಮಾಡಿದ ಹೆಗ್ಗಳಿಕೆ ಇವರದು. ಇದರ ಜೊತೆಗೆ ಮತ್ತೊಂದು ಮುಖ್ಯ ಸಂಗತಿಯೆಂದರೆ "ಏಕವ್ಯಕ್ತಿ ಯಕ್ಷಗಾನ"ದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡದ್ದು. ತನ್ನದೇ ಕಲ್ಪನೆಯಲ್ಲಿ ಎ.ಪಿ.ಫಾಟಕ್ ಮತ್ತು ಕೆ.ಜೆ.ರಾಮರಾವ್ ನಿರ್ದೇಶನದಲ್ಲಿ "ಮಮ ಪ್ರಾಣಾಹಿ ಪಾಂಡವಾಃ" ಮತ್ತು ಶಭು ಹೆಗಡೆಯವರ ಶಿಷ್ಯ ಸದಾಶಿವ ಮಲವಳ್ಳಿ ಇವರ ನಿರ್ದೇಶನದಲ್ಲಿ "ಮಾರಾವತಾರ" ಎಂಬ ಎರಡು ಏಕವ್ಯಕ್ತಿ ಯಕ್ಷಗಾನಗಳನ್ನು ಸುಮಾರು ಸುಮಾರು 40 ರಷ್ಟು ಕಡೆಗಳಲ್ಲಿ ಪ್ರದರ್ಶನ ನೀಡಿದ್ದು ಇವರ ಹಿರಿಮೆ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೇ ಹೊರರಾಜ್ಯಗಳಾದ ದೆಹಲಿ, ಪೂನಾ, ತಂಜಾವೂರು, ಕಾಶಿ, ಮುಂಬೈ, ಹೈದರಾಬಾದ್ ಮುಂತಾದ ಅನೇಕ ಊರು–ಪರವೂರುಗಳಲ್ಲಿ ಇವರ ಭರತನಾಟ್ಯ ಹಾಗೂ ಯಕ್ಷಗಾನ ಪ್ರದರ್ಶನಗಳು ನಡೆದಿವೆ. ಇವರ ಅಷ್ಟು ಮಾತ್ರವಲ್ಲದೇ ಅಕ್ಕ ಸಮ್ಮೇಳನಕ್ಕೂ ಆಯ್ಕೆ ಆದವರು ಇವರು. ಶಿವಮೊಗ್ಗದ ಶ್ರೀ ಸಾಯಿ ಕಲಾ ಪ್ರತಿಷ್ಠಾನದ ಕಾರ್ಯದರ್ಶಿಯಾಗಿ, ಶ್ರೀ ಯಕ್ಷವಲ್ಲರಿ ಮಹಿಳಾ ಯಕ್ಷಕಲಾ ಕೂಟದ ಕಾರ್ಯನಿರ್ವಾಹಕ ನಿರ್ದೇಶಕಿಯಾಗಿಯೂ ಇರುವ ಇವರು ಯಕ್ಷಗಾನ ಪ್ರದರ್ಶನಗಳು ಮಾತ್ರವಲ್ಲದೇ ಯಕ್ಷಗಾನ ಸಂಬಂಧೀ ಇತರ ಕಾರ್ಯಕ್ರಮಗಳನ್ನು ಕೂಡ ನಡೆಸುತ್ತಾ ಬಂದಿದ್ದಾರೆ. 2012ರಲ್ಲಿ ಶಿವಮೊಗ್ಗದ ಕುವೆಂಪು ರಂಗಮದಿರದಲ್ಲಿ ನಡೆದ "ಯಕ್ಷಸಂಪದ" ಎಂಬ ರಾಜ್ಯಮಟ್ಟದ ಮಹಿಳಾ ಯಕ್ಷಗಾನ ಸಮ್ಮೇಳನದ ರೂವಾರಿ ಹಾಗೂ 2016 ಫೆಬ್ರವರಿಯಲ್ಲಿ ನಡೆದ ರಾಜ್ಯಮಟ್ಟದ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಪ್ರಧಾನ



ಕಾರ್ಯದರ್ಶಿಯೂ ಆಗಿದ್ದರು. ಇವರ ಯಕ್ಷಗಾನ ಕ್ಷೇತ್ರದ ಸಾಧನೆಯನ್ನು ಗುರುತಿಸಿ ನೃಪತುಂಗ ಕಲಾನಿಕೇತನ ಮತ್ತು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ದಿಂದ 2012 ರಲ್ಲಿ "ಕರ್ನಾಟಕ ಭೂಷಣ" ಪ್ರಶಸ್ತಿ, 2015 ರಲ್ಲಿ "ಅಭಿನಯ ಶಾರದೆ" ಪ್ರಶಸ್ತಿ ಇವರ ಮುಡಿಗೇರಿದೆ. ಇವರ ಸಾಧನೆಗೆ ಮತ್ತೊಂದು ಗರಿಯೆಂದರೆ ಪುಟ್ಟಪರ್ತಿ ಸತ್ಯಸಾಯಿ ಬಾಬಾರ ಎದುರು "ಗ್ಲೋರಿ ಆಫ್ ಸಾಯಿ" ಎಂಬ ನೃತ್ಯರೂಪಕವನ್ನು ಕರ್ನಾಟಕ, ತಮಿಳುನಾಡು, ಒರಿಸ್ಸಾ, ಕೆನಡಾದ ಮಕ್ಕಳಿಗೆ ತರಬೇತಿ ನೀಡಿ "ನಾಟ್ಯ ಮಯೂರಿ" ಎಂಬ ಬಿರುದು ಪಡೆದುಕೊಂಡವರು ಇವರು. ಕರ್ನಾಟಕ ಸರಕಾರ ನಡೆಸುವ ಭರತನಾಟ್ಯ ಪರೀಕ್ಷೆಗೆ ಪರಿವೀಕ್ಷಕರಾಗಿಯೂ ಇವರು ಹೋಗುತ್ತಾರೆ. ತನ್ನ ಕಲಾ ಜೀವನದ ಜೊತೆಗೆ ಸಂಸಾರಿಯಾಗಿಯೂ ಓರ್ವ ಮಗನಿಗೆ ತಾಯಿಯಾಗಿ, ಪತಿಯ ನೆಚ್ಚಿನ ಮಡದಿಯಾಗಿ, ಕಲಾವಿದೆಯಾಗಿ ಇರುವ ಇವರ ಜೀವನ ಪಥ ಸೊಗದಿಂದ ಸಾಗಲಿ ಎಂಬ ಆಶಯವಷ್ಟೇ ನಮ್ಮದು.

***ಲೇಖಕರು– ಸಾಯಿಸುಮಾ ಎಂ. ನಾವಡ, ಕಾರಿಂಜ***

## ಅಗರಿ ಶ್ರೀನಿವಾಸ ಭಾಗವತರ ಯಕ್ಷಗಾನ ಪ್ರಸಂಗ ಕೃತಿಗಳು



***ಉಮೇಶ ಶಿರೂರು***

ಅಗರಿ ಶ್ರೀನಿವಾಸ ಭಾಗವತ (1906 –1997) ಹಿರಿಯ ಯಕ್ಷಗಾನ ಕವಿ ಹಾಗೂ ಭಾಗವತರು. ಇವರ ತಂದೆ ತಿಮ್ಮಪ್ಪಯ್ಯ, ತಾಯಿ ರಾಧಮ್ಮ, ಪತ್ನಿ ರುಕ್ಮಿಣಿ. ಅಗರಿ ಭಾಸ್ಕರ್ ರಾವ್ ಮತ್ತು ಅಗರಿ ರಘುರಾಮ ಭಾಗವತರು ಇವರ ಸುಪುತ್ರರು. ಇವರು ಸುರತ್ಕಲ್ ಸಮೀಪದ ಹೊಸಬೆಟ್ಟಿನವರು. ನಂತರ ಎಡಪದವು ಹತ್ತಿರದ ಅಗರಿಯಲ್ಲಿ ನೆಲೆಸಿದ್ದರು. ಧರ್ಮಸ್ಥಳ, ಕಟೀಲು, ಕೂಡ್ಲು, ಸುರತ್ಕಲ್ ಮೇಳಗಳಲ್ಲಿ ಭಾಗವತರಾಗಿ ಪ್ರಸಿದ್ಧರಾಗಿದ್ದರು. ಇವರು 28 ಯಕ್ಷಗಾನ ಪ್ರಸಂಗಗಳನ್ನು ಬರೆದು ಯಕ್ಷಕವಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಶ್ರೀದೇವಿ ಮಹಾತ್ಮೆ, ಬ್ರಹ್ಮಕಪಾಲ, ಶಿವಲೀಲಾರ್ಪಣ, ಅಂಧಕಾಸುರವಧೆ, ಪ್ರಭಾವತೀ ಪರಿಣಯ, ಧನಗುಪ್ತ–ಮಹಾಬಲಿ, ಭಗವಾನ್ ಏಸುಕ್ರಿಸ್ತ, ಮಹಾದೇವಿ ಲಲಿತೋಪಾಖ್ಯಾನ, ನಾರಾಯಣ ಗುರುಮಹಾತ್ಮೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ, ವೆಂಕಟೇಶ ಮಹಾತ್ಮೆ, ಭರತೇಶ ವೈಭವ, ಶ್ರೀದೇವಿ ಭ್ರಮರಾಂಬಿಕಾ ವಿಲಾಸ, ಭಸ್ಮಾಸುರ ಮೋಹಿನಿ, ಸುಂದೋಪಸುಂದರ ಕಾಳಗ, ಸಿರಿಮಹಾತ್ಮೆ, ಭಸ್ಮರುದ್ರಾಕ್ಷಿ ಮಹಾತ್ಮೆ, ಭಗವಾನ್ ಬುದ್ಧ, ಅಭಯರಾಣಿ ಅಬ್ಬಕ್ಕ, ವಿಶ್ವಾಮಿತ್ರ ಮೇನಕೆ, ಶುಕ್ರಪ್ರತಾಪ, ಜಗದ್ಗುರು ಶಂಕರಾಚಾರ್ಯ, ತಾರಾ ಶಶಾಂಕ, ಕಣ್ವಪುರ ಮಹಾತ್ಮೆ, ಹೊಂಬುಚ್ಚ ಕ್ಷೇತ್ರ ಮಹಾತ್ಮೆ, ಆಟದೊಳಗಿನ ಆಟ,ತುಳಸಿ ಜಲಂಧರ, ನರಕಾಸುರ ವಧೆ ಇವು ಅಗರಿ ಶ್ರೀನಿವಾಸ ಭಾಗವತರು ರಚಿಸಿದ ಪ್ರಸಂಗ ಕೃತಿಗಳು. ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ, ಮುಂಬಯಿ ಇವರು 2007 ರಲ್ಲಿಅಗರಿ ಶ್ರೀನಿವಾಸ ಭಾಗವತರ 16 ಪ್ರಸಂಗಗಳ ಸಂಪುಟವನ್ನು ಪ್ರಕಟಿಸಿದ್ದಾರೆ. ಭರತೇಶ ವೈಭವ ಪ್ರಸಂಗ ಕೃತಿಯನ್ನು ಅಗರಿ ಶ್ರೀನಿವಾಸ ಭಾಗವತರು 1956 ರಲ್ಲಿ ಪ್ರಕಟಿಸಿದ್ದಾರೆ. ಎಚ್ ಬಿ ಎಲ್ ರಾವ್ ನೇತೃತ್ವದ ಪದವೀಧರ ಯಕ್ಷಗಾನ ಸಮಿತಿ ಮುಂಬಯಿ ಇವರು 1998 ರಲ್ಲಿ ಅಗರಿ ಶ್ರೀನಿವಾಸ ಭಾಗವತ ಸಂಸ್ಮರಣಾ ಯಕ್ಷಗಾನ ಪ್ರಸಂಗ ಮಾಲಿಕೆಯನ್ನು ಪ್ರಕಟಿಸಿದ್ದು ಇದರಲ್ಲಿ ಅಗರಿ ಭಾಗವತರ ಶ್ರೀ ಗುರುನಾರಾಯಣ ಸ್ವಾಮಿ ಚರಿತ್ರೆ ಸೇರಿಂದಂತೆ ಆರು ಪ್ರಸಂಗ ಕೃತಿಗಳು ಪ್ರಕಟವಾಗಿವೆ. ಶ್ರೀ ಕಟೀಲು ಕ್ಷೇತ್ರ ಶ್ರೀದೇವಿ ಭ್ರಮರಾಂಬಿಕಾ ವಿಲಾಸ, ಮತ್ತು ಶ್ರೀ ತುಳುನಾಡ ಸಿರಿ ಮಹಾತ್ಮೆ ಕೃತಿಗಳನ್ನು ಅಗರಿ ಶ್ರೀನಿವಾಸ ಭಾಗವತರು ಪ್ರಕಟಿಸಿದ್ದಾರೆ. ಅಗರಿಯವರ ಶ್ರೀದೇವಿ ಮಹಾತ್ಮೆ ಯಕ್ಷಗಾನ ಕೃತಿಯನ್ನು ಶ್ರೀ ಶರಚ್ಚಂದ್ರ ಇವರು ಹಿಂದಿಗೆ ಅನುವಾದ ಮಾಡಿ ಪಣಂಬೂರು ಶ್ರೀ ರಾಘವ ರಾವ್ ಸಂಸ್ಮರಣಾ ಕೃತಿ ರಾಘವಾಯಣದಲ್ಲಿ 2016ರಲ್ಲಿ ಪ್ರಕಟಿಸಿದ್ದಾರೆ. ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮೆ ಪ್ರಸಂಗ ಪದವೀಧರ ಯಕ್ಷಗಾನ ಸಮಿತಿ ಮುಂಬಯಿ ಇವರು ಪ್ರಕಟಿಸಿದ ಪೊಲ್ಯ ದೇಜಪ್ಪ ಶೆಟ್ಟಿ ಸಂಸ್ಮರಣ ಪ್ರಸಂಗ ಮಾಲಿಕೆ ಸಂಪುಟದಲ್ಲಿ 1998ರಲ್ಲಿ ಪ್ರಕಟವಾಗಿದೆ. ಶ್ರೀ ಮಹಾದೇವೀ ಲಲಿತಾ ಉಪಾಖ್ಯಾನ ಯಕ್ಷಗಾನ ಪ್ರಸಂಗ 1969ರಲ್ಲಿ ಪ್ರಕಟವಾಗಿದೆ. ಶ್ರೀ ವೆಂಕಟೇಶ ಮಹಾತ್ಮ ಅಥವಾ ಪದ್ಮಾವತೀ ಪರಿಣಯ ಯಕ್ಷಗಾನ ಪ್ರಸಂಗ 1963ರಲ್ಲಿ ಪ್ರಕಟವಾಗಿದೆ. ಅಗರಿ ಶ್ರೀನಿವಾಸ ಭಾಗವತರು ಪ್ರಸಂಗಕರ್ತರಾಗಿ ಭಾಗವತರಾಗಿ ಯಕ್ಷಗಾನ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ.

***ಲೇಖಕರು– ಉಮೇಶ ಶಿರೂರು, ಬೆಂಗಳೂರು 9448353910***

## ಸ್ತ್ರೀವೇಷಗಳು ಮತ್ತು ಹಾಸ್ಯ ವೇಷಗಳ ಪ್ರಾತ್ಯಕ್ಷಿಕೆ ಹಾಗೂ ದಾಖಲೀಕರಣ

ಅಕ್ಟೋಬರ್ 1, 2023 ಆದಿತ್ಯವಾರದಂದು ಉಡುಪಿ ಎಂ.ಜಿ.ಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಯಕ್ಷಗಾನ ಕೇಂದ್ರ ಇಂದ್ರಾಳಿ, ಉಡುಪಿ, ಮಾಹೆ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಯಕ್ಷದಿಗ್ಗಜರಿಂದ ಯಕ್ಷಗಾನ ಪುರಾಣ ಪ್ರಸಂಗಗಳ ಆಯ್ದ ಸ್ತ್ರೀವೇಷಗಳು ಮತ್ತು ಹಾಸ್ಯವೇಷಗಳ ಪ್ರಾತ್ಯಕ್ಷಿಕೆ ಹಾಗೂ ದಾಖಲೀಕರಣ ನಡೆಯಿತು.

ಮಣಿಪಾಲ ಮಾಹೆ ವಿಶ್ವವಿದ್ಯಾಲಯದ ಸಹಕುಲಾಧಿಪತಿ ಡಾ. ಎಚ್. ಎಸ್. ಬಲ್ಲಾಳ್ ಕಾರ್ಯಕ್ರಮವನ್ನು ಉದ್ಘಾಟಿಸಿ, 'ಕಲೆ–ಸಾಹಿತ್ಯ–ಸಂಸ್ಕೃತಿಗೆ ಪ್ರೋತ್ಸಾಹ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಆ ಹಿನ್ನಲೆಯಲ್ಲಿ ಮಾಹೆ ವಿಶ್ವವಿದ್ಯಾಲಯ ಯಕ್ಷಗಾನ ಕೇಂದ್ರದ ಮೂಲಕ ಯಕ್ಷಕಲೆಗೆ ಕಾಯಕಲ್ಪ ನೀಡುವಲ್ಲಿ ಸಹಾಯವನ್ನು ನೀಡುತ್ತಾ ಬಂದಿದೆ. ಯಕ್ಷಗಾನದಲ್ಲಿ ಸ್ತ್ರೀವೇಷ ಹಾಗೂ ಹಾಸ್ಯವೇಷಗಳ ನಿರ್ವಹಣೆ ಸವಾಲಿನದ್ದು, ಕಲಾವಿದರ ಬದ್ಧತೆಯು ಮೆಚ್ಚುವಂತದ್ದು. ಆ ನಿಟ್ಟಿನಲ್ಲಿ ಮಾಹೆ ಆಡಳಿತಕ್ಕೊಳಪಟ್ಟ ಯಕ್ಷಗಾನ ಕೇಂದ್ರ ಇಂದ್ರಾಳಿ ಹಾಗೂ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಮೂಲಕ ಪ್ರಾತ್ಯಕ್ಷಿಕೆಯ ಜೊತೆಯಲ್ಲಿ ದಾಖಲೀಕರಣದ ಉಪಯುಕ್ತ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅದರ ಸದುಪಯೋಗ ಯಕ್ಷಗಾನ ಕ್ಷೇತ್ರಕ್ಕೆ ದೊರಕಲಿ' ಎಂದು ಶುಭ ಹಾರೈಸಿದರು. ಸಭಾಧ್ಯಕ್ಷತೆಯನ್ನು ವಹಿಸಿರುವ ಯಕ್ಷಗಾನ ಕೇಂದ್ರದ ಸಲಹಾ ಸಮಿತಿಯ ಅಧ್ಯಕ್ಷರಾದ ಪಿ. ಕಿಶನ್ ಹೆಗ್ಡೆ ಅವರು ಮಾತನಾಡಿ 'ಯಕ್ಷಗಾನ ರಂಗದ ಭವಿಷ್ಯದ ದೃಷ್ಟಿಯಿಂದ ಇಂತಹ ಪ್ರಾತ್ಯಕ್ಷಿಕೆ ಮತ್ತು ದಾಖಲೀಕರಣದ ಅಗತ್ಯವನ್ನು ಮನಗಂಡು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ' ಎಂದರು. ಎಂ.ಜಿ.ಎಂ ಕಾಲೇಜಿನ ಪ್ರಾಂಶುಪಾಲ ಪ್ರೊ. ಲಕ್ಷ್ಮೀನಾರಾಯಣ ಕಾರಂತ ಅವರು ಮಾತನಾಡಿ 'ಹಿಂದೆ ಯಕ್ಷಗಾನ ರಂಗಸ್ಥಳ ಮತ್ತು ಚೌಕಿಯೇ ಕಲಿಕೆಗೆ ಪೂರಕವಾಗಿತ್ತು, ಯಕ್ಷಗಾನ ಕೇಂದ್ರ ಯಕ್ಷಗಾನ ಕಲಿಕೆಗೆ ಗುರುಕುಲ ಮಾದರಿಯಲ್ಲಿ ಶೈಕ್ಷಣಿಕ ರೂಪುಕೊಟ್ಟು ಕಲಿಸುತ್ತಿರುವುದು ಶ್ಲಾಘನೀಯ ಮತ್ತು ಇಂತಹ



ಪ್ರಾತ್ಯಕ್ಷಿಕೆ ದಾಖಲೀಕರಣ ಕಾರ್ಯಕ್ರಮ ಯಶಸ್ವಿಯಾಗಲಿ’ ಎಂದು ಶುಭ ಹಾರೈಸಿದರು.

ಉಡುಪಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಶ್ರೀಮತಿ ಪೂರ್ಣಿಮಾ ಅವರು ಮಾತನಾಡಿ ‘ಪ್ರಾದೇಶಿಕ ಜಾನಪದ ಕಲೆಗಳನ್ನು ಉಳಿಸುವುದು ಅಗತ್ಯ, ಅದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕಾದರೆ ದಾಖಲೀಕರಣದ ಅಗತ್ಯ ಇದೆ. ಅಂತಹ ಕಾರ್ಯಕ್ರಮಗಳಿಗೆ ಕನ್ನಡ ಸಂಸ್ಕೃತಿ ಇಲಾಖೆ ಸದಾ ಪ್ರೋತ್ಸಾಹವನ್ನು ನೀಡುತ್ತದೆ’ ಎಂದರು.

ಕೆ.ಎಂ.ಸಿ ಮಣಿಪಾಲದ ನೇತ್ರತಜ್ಞರಾದ ಡಾ. ಶೈಲಜಾ ಹಾಗೂ ಹಿರಿಯ ಸ್ತ್ರೀವೇಷಧಾರಿ ಬೇಳಂಜೆ ಜಯಂತ ನಾಯ್ಕ ಸಭೆಯಲ್ಲಿ ಉಪಸ್ಥಿತರಿದ್ದರು. ಯಕ್ಷಗಾನ ಕೇಂದ್ರ ಹಾಗೂ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಆಡಳಿತಾಧಿಕಾರಿ ಡಾ. ಬಿ. ಜಗದೀಶ್ ಶೆಟ್ಟಿ ಸ್ವಾಗತಿಸಿದರು. ಪ್ರಾತ್ಯಕ್ಷಿಕೆಯ ಸಂಯೋಜಕ ಪ್ರೊ. ಎಸ್. ವಿ ಉದಯಕುಮಾರ್ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಉಪನ್ಯಾಸಕ ರಾಘವೇಂದ್ರ ತುಂಗ ನಿರೂಪಿಸಿದರು. ಕೇಂದ್ರದ ಸಲಹಾಸಮಿತಿಯ ಸದಸ್ಯರಾದ ವಿಶ್ವನಾಥ ಶೆಣೈ, ಭುವನಪ್ರಸಾದ ಹೆಗ್ಡೆ, ಮಂಜುನಾಥ ಮಯ್ಯ, ಅತಿಥಿಗಳನ್ನು ಗೌರವಿಸಿದರು.

ಪ್ರಾತ್ಯಕ್ಷಿಕೆಯ ಆರಂಭದಲ್ಲಿ ‘ಬಬ್ರುವಾಹನ ಕಾಳಗದ’ ಚಿತ್ರಾಂಗದೆ–ಕಟಕಿ ಪಾತ್ರಗಳ ಸಂಭಾಷಣೆಯ ಸನ್ನಿವೇಶವನ್ನು ಪ್ರದರ್ಶಿಸಲಾಯಿತು. ಪಾಂಡವಾಶ್ವಮೇಧದ ತುರಗ ಮಣಿಪುರವನ್ನು ಪ್ರವೇಶಿಸಿದ ವಿಷಯವನ್ನು ಸಖಿ ಕಟಕಿಯಿಂದ ಕೇಳಿ ತಿಳಿದ ಚಿತ್ರಾಂಗದೆ ತುರಗದ ಬೆಂಗಾವಲಿಗಾಗಿ ಬಂದು ಅರ್ಜುನನ ಕುರಿತಾಗಿ ಮತ್ತೆ ಮತ್ತೆ ಕೇಳಿ ಸಂತೋಷ ಪಡುವುದು, ಅರಿಯದೆ ಕುದುರೆಯನ್ನು ಕಟ್ಟಿದ ಮಗ ಬಬ್ರುವಾಹನನಿಂದ ಆದ ಪ್ರಮಾದಕ್ಕೆ ಪ್ರತಿಕ್ರಿಯಿಸುವ ಮನೋಜ್ಞ ಅಭಿನಯವನ್ನು ಹೊಸಂಗಡಿ ರಾಜೀವ ಶೆಟ್ಟಿ –ಚಿತ್ರಾಂಗದೆ, ಮನೋಹರ ನಾಯಕ್– ಕಟಕಿ ಪಾತ್ರಗಳನ್ನು ನಿರ್ವಹಿಸಿದರು. ಬಳಿಕ ‘ರಾಜಾಯಯಾತಿ ‘(ಕಚದೇವಯಾನಿ) ಪ್ರಸಂಗದ ಪ್ರಮುಖ ಸನ್ನಿವೇಶವಾದ ದೇವಯಾನಿ ಮತ್ತು ಶರ್ಮಿಷ್ಠೆ ವನವಿಹಾರಕ್ಕೆ ಹೋಗುವುದು ಜಲಕ್ರೀಡೆಯನ್ನಾಡುವುದು ಅಲ್ಲಿ ವಸನದ ಕಾರಣಕ್ಕಾಗಿ ನಡೆಯುವ ವಾಗ್ವಾದವನ್ನು ಸಮರ್ಥವಾಗಿ ಪ್ರದರ್ಶಿಸಲಾಯಿತು. ಹಿರಿಯ ಕಲಾವಿದರಾದ ಆನಂದರಾವ್ –ದೇವಯಾನಿಯಾಗಿ, ಸಂಜೀವ ಶೆಟ್ಟಿ–ಶರ್ಮಿಷ್ಠೆಯಾಗಿ ಪಾತ್ರಗಳಿಗೆ ನ್ಯಾಯ ಒದಗಿಸಿದರು. ‘ದ್ರೌಪದಿ ಪ್ರತಾಪ’ದ ದ್ರೌಪದಿಯಾಗಿ ಸುಂದರ ನಾಯ್ಕ ಸುಭದ್ರೆಯಾಗಿ ಪ್ರದೀಪ ಶೆಟ್ಟಿಯವರು ಆ ಪ್ರಸಂಗದ ದ್ರೌಪದಿ–ಸುಭದ್ರೆ  ಯುದ್ಧಕ್ಕಾಗಿ ಮುಖಾಮುಖಿಯಾಗುವ ಸನ್ನಿವೇಶವನ್ನು ಪ್ರದರ್ಶಿಸಿದರು. ಕಸೆ ಸ್ತ್ರೀವೇಷದ ಪಾರಂಪರಿಕ ನಡೆಗಳನ್ನು ತೋರಿಸುವ ಮೂಲಕ ದಾಖಲೀಕರಣಕ್ಕೆ ಬೇಕಾದ ಗ್ರಾಸವನ್ನೊದಗಿಸಿದರು. ಹಿರಿಯ ಅನುಭವಿ ಸ್ತ್ರೀಪಾತ್ರಧಾರಿ ವಿಷ್ಣುಮೂರ್ತಿ ಬಾಸ್ರಿ– ಮಾಯಾ ಶೂರ್ಪನಖಿಯಾಗಿ, ಮುಗ್ವ ಗಣೇಶ ನಾಯಕ –ರಾಮನಾಗಿ ‘ಪಂಚವಟಿ’ ಪ್ರಸಂಗದ ಸನ್ನಿವೇಶವನ್ನು ಕಟ್ಟಿಕೊಟ್ಟರು. ಪ್ರಮುಖ ಪದ್ಯಗಳಿಗೆ ಭಾವನಾತ್ಮಕ ಅಭಿನಯದಿಂದ ಶೃಂಗಾರ ರಸಾಭಿವ್ಯಕ್ತಿಯ ಪರಿಚಯವನ್ನು ಮಾಡಿಸಿದರು. ವೀರರಸ ಪ್ರಧಾನವಾದ ‘ಅಭಿಮನ್ಯು ಕಾಳಗ’ದ ಸುಭದ್ರೆಯಾಗಿ –ಜಯಾನಂದ, ಅಭಿಮನ್ಯುವಾಗಿ– ಆದಿತ್ಯ ಹೆಗಡೆ ಭಾಗವಹಿಸಿದ್ದರು. ಗುರು ದ್ರೋಣಾಚಾರ್ಯರಿಂದ ರಚಿಸಲ್ಪಟ್ಟ ಚಕ್ರವ್ಯೂಹವನ್ನು ಭೇದಿಸಲು ಧರ್ಮರಾಯನಿಂದ ಅಪ್ಪಣೆ ಪಡೆದು ಹೊರಟ ಅಭಿಮನ್ಯು ತಾಯಿಯಿಂದ ಆಶೀರ್ವಾದ ಪಡೆಯುವ ಸನ್ನಿವೇಶ ಪ್ರಾತ್ಯಕ್ಷಿಕೆಗೆ ಪೂರಕವಾಗಿತ್ತು. ಬಿಡುವಿಲ್ಲದೆ ನಡೆದ ದಾಖಲೀಕರಣದಲ್ಲಿ ಮುಂದೆ ಹಾಸ್ಯ ಸನ್ನಿವೇಶಗಳನ್ನು ಪ್ರದರ್ಶಿಸಲಾಯಿತು. ‘ಪಟ್ಟಾಭಿಷೇಕ’ ಪ್ರಸಂಗದ ಮಂಥರೆಯಾಗಿ –ಮಹಾಬಲ ದೇವಾಡಿಗ, ಕೈಕೆಯಾಗಿ –ರಮೇಶ ಗಾಣಿಗ ಅಚ್ಚುಕಟ್ಟಾದ ಸಮರ್ಥ ಪ್ರಸ್ತುತಿಯನ್ನು ಮಾಡಿದರು. ರಾಮನಿಗೆ ಪಟ್ಟಾಭಿಷೇಕ ಎಂದು ಗುಪ್ತವಾಗಿ ತಿಳಿದ ಮಂಥರೆ ತನ್ನ ನಿರ್ಧಾರವನ್ನು ಕೈಕೆಯ ಮೂಲಕ ನೆರವೇರಿಸುವ, ಕೈಕೆಯ ಮನಸ್ಸು ವಿಚಲಿತವಾಗುವ ದೃಶ್ಯ ಚೆನ್ನಾಗಿ ಮೂಡಿಬಂದಿತು. ನಂತರ ಬಡಗುತಿಟ್ಟು–ತೆಂಕುತಿಟ್ಟಿನಲ್ಲಿ ಹೆಚ್ಚು ಪ್ರದರ್ಶನ ಕಾಣುವ ನಾಟಕೀಯತೆ ಪ್ರಧಾನವಾದ ‘ಬೇಡರ ಕಣ್ಣಪ್ಪ’ ಪ್ರಸಂಗದ ಕೈಲಾಸಶಾಸ್ತ್ರಿ–ಕಾಶಿಮಾಣಿ ಗೌರಿ ಸನ್ನಿವೇಶವನ್ನು ಪ್ರಸ್ತುತಿಗಾಗಿ ತೆಗೆದುಕೊಳ್ಳಲಾಯಿತು. ಕಾಶಿಮಾಣಿಯಾಗಿ– ಹಳ್ಳಾಡಿ ಜಯರಾಮ ಶೆಟ್ಟಿ, ಶೇಖರಶೆಟ್ಟಿ ಕೆಲಾಸ –ಶಾಸ್ತ್ರಿಯಾಗಿ, ಗೌರಿಯಾಗಿ –ನಾಗಪ್ಪ ಉತ್ತಮ ಪ್ರದರ್ಶನ ನೀಡಿದರು. ‘ಶ್ರೀಕೃಷ್ಣ ಗಾರುಡಿ’ ಪ್ರಸಂಗದ ಪ್ರಮುಖ ಹಾಸ್ಯಸನ್ನಿವೇಶದ ಪ್ರಸ್ತುತಿಗಾಗಿ ಗಾರುಡಿಗರಾಗಿ– ಪೂವಪ್ಪ ಮತ್ತು ಚಂದ್ರಕುಲಾಲ ರಂಜಿಸಿ, ಕಾರ್ಯಕ್ರಮದ ಯಶಸ್ಸಿನಲ್ಲಿ ಭಾಗಿಯಾದರು. ನಂತರ ‘ಘೋಷಯಾತ್ರೆ’ ಪ್ರಸಂಗದಲ್ಲಿ



ಅಪಶಕುನದ ಪಾತ್ರವನ್ನು ನಾಗಪ್ಪ ಅವರು ನಿರ್ವಹಿಸಿದರು. ಘೋಷಯಾತ್ರೆ ಅಥವಾ ಚಿತ್ರಸೇನ ಕಾಳಗ ಯಕ್ಷರಂಗದಲ್ಲಿ ಅಪರೂಪವಾಗುತ್ತಿರುವ ಈ ಸಂದರ್ಭದಲ್ಲಿ ‘ಅಪಶಕುನ’ದ ಸನ್ನಿವೇಶವನ್ನು ಕಲಾವಿದರು ಸಮರ್ಥವಾಗಿ ನಿರ್ವಹಿಸಿ ರಂಗದಲ್ಲಿ ಕಣ್ಮರೆಯಾದ ಅಪರೂಪದ ದೃಶ್ಯಕ್ಕೆ ಸಾಕ್ಷಿಯಾದರು. ‘ಸುಭದ್ರಕಲ್ಯಾಣ’ದ ಯತಿ ಅರ್ಜುನನಾಗಿ –ಶಿವಕುಮಾರ್, ವನಪಾಲಕನಾಗಿ– ಚಂದ್ರಕುಲಾಲ ನಿರ್ವಹಿಸಿದರು. ಸುಭದ್ರಾ ಕಲ್ಯಾಣಕ್ಕೆ ಆಗಮಿಸಿದ ಅರ್ಜುನ, ಶ್ರೀಕೃಷ್ಣನ ನಿರ್ದೇಶನದಂತೆ ಮುನಿ ವೇಶದಲ್ಲಿ ಉದ್ಯಾನವನದಲ್ಲಿರುವ ಅರ್ಜುನನನ್ನು ಬೇರೆ ಬೇರೆ ರೀತಿಯಿಂದ ಮಾತನಾಡಿಸುವ ಪ್ರಯತ್ನದಲ್ಲಿ ನಿರತವಾದ ವನಪಾಲಕನ ಅಭಿನಯ ಸುಂದರವಾಗಿ ಮೂಡಿಬಂದಿತು.

ಯಕ್ಷಗಾನ ರಂಗದಲ್ಲಿ ಬಾಹುಕನ ವೇಷ ನಿರ್ವಹಣೆಗೆ ಹೆಸರಾದ ಮಹಾಬಲ ದೇವಾಡಿಗ ಖ್ಯಾತ ಸ್ತ್ರೀವೇಷಧಾರಿ ರಾಜೀವ ಶೆಟ್ಟಿಯವರು ಮುಂದಿನ 'ನಳದಮಯಂತಿ' ಆಖ್ಯಾನದ ಬಾಹುಕ –ದಮಯಂತಿಯ ದೃಶ್ಯವನ್ನು ಚೆನ್ನಾಗಿ ಪ್ರಸ್ತುತ ಪಡಿಸಿದರು. ಈ ಎಲ್ಲಾ ದೃಶ್ಯಗಳಿಗೆ ಸಮರ್ಥ ಭಾಗವತರಾಗಿ ಯಕ್ಷಗಾನ ಕೇಂದ್ರದ ಗುರುಗಳಾದ ಉಮೇಶ ಸುವರ್ಣ ಯಕ್ಷರಂಗದ ಭಾಗವತ ದೇವರಾಜ ದಾಸ್ ಸಹಕರಿಸಿದರು. ಕೇಂದ್ರದ ಇನ್ನೋರ್ವ ಗುರು ಕೃಷ್ಣಮೂರ್ತಿ ಭಟ್ ಚಂಡೆಯಲ್ಲಿ, ಮಹೇಶ್ ಕುಮಾರ್ ಹಾಗೂ ನಾಗರಾಜ ಎಡಮೊಗೆ ಮದ್ದಲೆಯಲ್ಲಿ ಸಾಥ್ ನೀಡಿದರು. ಪ್ರಾತ್ಯಕ್ಷಿಕೆಯ ಸಮಗ್ರ ನಿರ್ವಹಣೆಯನ್ನು ಪ್ರಾಧ್ಯಾಪಕ ಪ್ರೊ.ಎಸ್. ವಿ. ಉದಯಕುಮಾರ್ ಶೆಟ್ಟಿ ನಿರ್ವಹಿಸಿದರು. ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿರುವ ಮಣಿಪಾಲ ಮಾಹೆ ವಿಶ್ವವಿದ್ಯಾಲಯದ ಕುಲಸಚಿವ ಡಾ ಪಿ ಗಿರಿಧರ ಕಿಣಿ ಮಾತನಾಡಿ, 'ಯಕ್ಷಗಾನ ಕೇಂದ್ರದ ಮೂಲಕ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ ಕೋರ್ಸ್ ಆರಂಭಿಸುವ ಇರಾದೆ ಇದೆ. ಈ ಯೋಜನೆ ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನಿಸಲಾಗುತ್ತದೆ. ಇದರಿಂದ ಯಕ್ಷಗಾನ ಕ್ಷೇತ್ರಕ್ಕೆ ಸಹಾಯವಾಗಲಿ' ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜಯರಾಮ ಶೆಟ್ಟಿ ಮಾತನಾಡಿ, 'ಇಂದಿನ ಪ್ರಾತ್ಯಕ್ಷಿಕೆ ಪೂರ್ಣಪ್ರಮಾಣದ ದೃಶ್ಯ ಸಂಯೋಜನೆಯಲ್ಲ, ಕಾಲಾನುಕ್ರಮದಲ್ಲಿ ಅಭಿನಯ, ಸಂಭಾಷಣೆಯನ್ನು ಕಲಾವಿದರು ಬದಲಾಯಿಸಿಕೊಳ್ಳಬಹುದು, ಆದರೆ ವೇಷಗಾರಿಕೆ ಹೀಗಿತ್ತು ಎಂಬುದನ್ನು ಮುಂದಿನ ತಲೆಮಾರಿಗೆ ಪರಿಚಯಿಸುವ ಪ್ರಯತ್ನ ಮಾಡಿದ್ದೇವೆ' ಎಂದರು. ನಿವೃತ್ತ ಮುಖ್ಯೋಪಾಧ್ಯಾಯ ಸರ್ಪು ಸದಾನಂದ ಪಾಟೀಲ್, ಯಕ್ಷಗಾನ ಪೋಷಕರಾದ ಗುಳ್ಮೆ ಕೃಷ್ಣ ನಾಯಕ್ ಅರ್ಥಪೂರ್ಣ ಕಾರ್ಯಕ್ರಮವನ್ನು ಹಮ್ಮಿಕೊಂಡದ್ದಕ್ಕಾಗಿ ಯಕ್ಷಗಾನ ಕೇಂದ್ರವನ್ನು ಶ್ಲಾಘಿಸಿದರು. ಕೇಂದ್ರದ ಆಡಳಿತಾಧಿಕಾರಿ ಡಾ ಬಿ. ಜಗದೀಶ್ ಶೆಟ್ಟಿ ನಿರೂಪಿಸಿ, ಸಲಹಾಸಮಿತಿ ಸದಸ್ಯ ಮಂಜುನಾಥ ಮಯ್ಯ ವಂದಿಸಿದರು. ನಂತರ ಉಡುಪಿ ಯಕ್ಷಗಾನ ಕೇಂದ್ರದ ಅಂಗಸಂಸ್ಥೆಯಾದ ಯಕ್ಷರಂಗದ ಕಲಾವಿದರಿಂದ 'ಭೀಷ್ಮಪ್ರತಿಜ್ಞೆ' ಯಕ್ಷಗಾನ ಪ್ರದರ್ಶನಗೊಂಡಿತು. ಭಾಗವತರಾಗಿ ಉಮೇಶ ಸುವರ್ಣ, ದೇವರಾಜ ದಾಸ, ಮದ್ದಲೆಯಲ್ಲಿ ನಾಗರಾಜ ಎಡಮೊಗೆ, ಚಂಡೆ ವಾದಕರಾಗಿ ಕೃಷ್ಣಮೂರ್ತಿ ಭಟ್ ಬಗ್ವಾಡಿ, ಶಂತನು ಗಣೇಶ ನಾಯ್ಕ ಮುಗ್ವ, ಗಾಲವ ಶಿವಕುಮಾರ ಅಳಗೋಡು, ಮುನಿಗಳಾಗಿ ಕೌಶಿಕ, ರಾಘವೇಂದ್ರ ಕರುಣಾಕರ, ತಮಾಲಕೇತುವಾಗಿ ರಾಘವೇಂದ್ರ ತುಂಗ ಕೋಟ, ದೇವವ್ರತ ಆದಿತ್ಯಭಟ್ ಯಡೂರು, ಯೋಜನಗಂಧಿಯಾಗಿ ಪ್ರತೀಶ್ ಕುಮಾರ್, ಮಂತ್ರಿಯಾಗಿ ಪ್ರವೀಣ ಕೊಪ್ಪಲ, ಕಂದರನಾಗಿ ಶೇಖರ ಶೆಟ್ಟಿ ಭಾಗವಹಿಸಿದ್ದರು. ವೇಷಭೂಷಣದಲ್ಲಿ ಗಣೇಶ ಬಳೆಗಾರ ಮತ್ತು ಬಳಗ, ಜನ್ನಾಡಿ, ಶಾಂತಾರಾಮ ಆಚಾರ್ಯ, ರಂಗನಾಥ ಶೆಟ್ಟಿಗಾರ ಸಹಕರಿಸಿದರು.

***ವರದಿ: ರಾಘವೇಂದ್ರ ತುಂಗ, ಉಪನ್ಯಾಸಕರು, ಎಂ.ಜಿ.ಎಂ ಕಾಲೇಜು***

# ಸಹಾಯದ ನಿರೀಕ್ಷೆಯಲ್ಲಿ ಯಕ್ಷಗುರು ಕೋಲೆಕಾಡಿ



ಅಭಿನವ ನಾಗವರ್ಮ ಬಿರುದಾಂಕಿತರಾದ ದಿ.ಡಾ. ಶಿಮಂತೂರು ನಾರಾಯಣ ಶೆಟ್ಟರ ಪಟ್ಟಶಿಷ್ಯ ಶ್ರೀ ಗಣೇಶ್ ಕೋಲೆಕಾಡಿಯವರು ಸಾವಿರಾರು ಶಿಷ್ಯಂದಿರಿಗೆ ಯಕ್ಷಗಾನದ ಹಿಮ್ಮೇಳ–ಮುಮ್ಮೇಳಗಳ ಉಚಿತ ಮೂಲಪಾಠ ಮಾತ್ರವಲ್ಲದೇ ಉಚಿತ ಊಟವನ್ನೂ ಒದಗಿಸಿದ ಗುರುಗಳು. ಆದರೆ, ಇಂದು ಗಣೇಶ್ ಕೋಲೆಕಾಡಿಯವರ ಸ್ಥಿತಿಯು ಅತ್ಯಂತ ಗಂಭೀರವಾಗಿದೆ. ತಮ್ಮದಲ್ಲದ ತಪ್ಪಿಗೆ ಭೀಕರವಾದ ನೋವು ಅನುಭವಿಸುತ್ತಾ ಇದ್ದಾರೆ. ಕಳೆದ 15 ವರ್ಷಗಳಿಂದ ಮಲಗಿದ್ದಲ್ಲೇ ನರಳುತ್ತಿದ್ದಾರೆ. ಕೋಲೆಕಾಡಿಯವರು ಸ್ವಾಭಿಮಾನಿಗಳಾಗಿದ್ದು ಇಷ್ಟರ ತನಕ ಯಾರಲ್ಲೂ ದೇಹಿ ಎಂದವರಲ್ಲ. ಆದರೆ, ಕೋಲೆಕಾಡಿಯವರ ಇಂದಿನ ಪರಿಸ್ಥಿತಿಯು ಕರುಣಾಜನಕವಾಗಿದೆ. ಕ್ಯಾನ್ಸರ್ ಗೆ ತುತ್ತಾಗಿ, ಇಂದು ಮಾತನಾಡಲೂ ಆಗದ ವೇದನೆಗೆ ಒಳಗಾಗಿದ್ದಾರೆ. ಇದರೊಂದಿಗೆ ಅನಾರೋಗ್ಯದಲ್ಲಿರುವ ತಾಯಿಯನ್ನೂ ಪೋಷಿಸಬೇಕಾಗಿದೆ. ತಿಂಗಳಿಗೆ ಸುಮಾರು 50,000ದಷ್ಟು ಹಣ ಇದಕ್ಕಾಗಿಯೇ ವ್ಯಯಿಸಬೇಕಾಗಿದೆ. ಆಸ್ಪತ್ರೆಗೆ ದಾಖಲಾದರೆ ಅದರ ವೆಚ್ಚ ಬೇರೆಯೇ ಇದೆ. ಯಕ್ಷರಂಗದ ಶ್ರೇಷ್ಠ ಪ್ರಸಂಗಕರ್ತರು, ಯಕ್ಷಗಾನ ಗುರುಗಳು, ಅರ್ಥಧಾರಿಗಳು ಹಾಗೂ ವರ್ತಮಾನ ಕಾಲದ ಶ್ರೇಷ್ಠ ಛಾಂದಸರೂ ಆಗಿರುವ ಕೋಲೆಕಾಡಿಯವರು, ಮೊದಲಿನಂತೆಯೇ ಆಗಬೇಕು ಎಂಬ ಹಂಬಲ, ಪ್ರಯತ್ನ ಅವರ ಶಿಷ್ಯಂದಿರು ಹಾಗೂ ಅಭಿಮಾನಿಗಳದ್ದು. ಕೋಲೆಕಾಡಿಯವರ ವೈದ್ಯಕೀಯ ವೆಚ್ಚಕ್ಕಾಗಿ ಹಲವಾರು ಸಹೃದಯರು ಸಹಾಯ ಮಾಡಿದ್ದರೂ, ಅದು ಸಾಲದಾಗುತ್ತಿದೆ. ಆದುದರಿಂದ ಅವರ ಶಿಷ್ಯಂದಿರು ತಮ್ಮ ಗುರುಗಳನ್ನು ಬದುಕಿಸಲು ಯಕ್ಷಗಾನ ಅಭಿಮಾನಿಗಳಲ್ಲಿ ಈ ಕೆಳಗಿನ ಮನವಿಯನ್ನು ಮಾಡಿದ್ದಾರೆ. ನಾನೂ ಗಣೇಶ್ ಕೋಲೆಕಾಡಿಯವರ ಅಭಿಮಾನಿಯಾಗಿದ್ದು, ದಯವಿಟ್ಟು ಸರ್ವ ಕಲಾಭಿಮಾನಿಗಳು ಈ ಕೆಳಗಿನ ಮನವಿಗೆ ಯಥಾಸಾಧ್ಯ ರೂಪದಲ್ಲಿ ಸಹಾಯಹಸ್ತ ಚಾಚಿ, ಕೋಲೆಕಾಡಿಯವರ ಬಾಳಿಗೆ ಬೆಳಕಾಗಬೇಕಾಗಿ ವಿನಂತಿಸುತ್ತಿದ್ದೇನ.

***ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

ಇದು ಯಾವುದೇ ಸಂಘ ಅಥವಾ ಸಂಘಟನೆಯ ಆಮಂತ್ರಣವಲ್ಲ. ಆದರೆ, ಸಹಾಯಕ್ಕಾಗಿ ಎದುರು ನೋಡುತ್ತಿರುವ ಒಂದು ಮಹಾ ಚೇತನಕ್ಕೆ ಸಹಾಯ ಹಸ್ತವನ್ನು ಚಾಚುವಂತೆ ಬಿನ್ನಹ ಪತ್ರ.

ಕೋಲೆಕಾಡಿಯವರಿಗೆ ಆರ್ಥಿಕ ನೆರವು ನೀಡುವುದಕ್ಕೋಸ್ಕರ ಕೋಲೆಕಾಡಿಯವರ ಶಿಷ್ಯಂದಿರು ಕೋಲೆಕಾಡಿ ಸಹಾಯ ಹಸ್ತ ಎನ್ನುವ ಒಂದು ಗ್ರೂಪನ್ನು ರಚಿಸಿದ್ದಾರೆ. ದಯವಿಟ್ಟು ಇದಕ್ಕೆ ಕೋಲೆಕಾಡಿಯವರ ಶಿಷ್ಯರು, ಅಭಿಮಾನಿಗಳು ಹಾಗೂ ಕಲಾಭಿಮಾನಿಗಳು ಸೇರಿ, ಸೇರಿದ ಪ್ರತಿಯೊಬ್ಬರೂ ಪ್ರತೀ ತಿಂಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಕೋಲೆಕಾಡಿಯವರ ಖಾತೆಗೆ ಹಿರಿದಾಗಿ ಧನಸಹಾಯವನ್ನು ಮಾಡುತ್ತಾ ಬರಬೇಕು ಎಂದು ಈ ಮೂಲಕ ನಿಮ್ಮಲ್ಲಿ ವಿನಂತಿಸುತ್ತಿದ್ದೇವೆ. ಈಗಾಗಲೇ ಹಲವಾರು ದಾನಿಗಳು ಈ ಗ್ರೂಪ್ ಗೆ ಸೇರ್ಪಡೆಯಾಗಿದ್ದಾರೆ. ನೀವು ನೀಡುವ ಈ ಸಹಾಯಹಸ್ತವು ವರ್ತಮಾನ ಕಾಲದ ಓರ್ವ ಶ್ರೇಷ್ಠ ಯಕ್ಷಗಾನ ಸಾಧಕನ ಬದುಕಿಗೆ ದೀಪ ಆಗುತ್ತದೆ. ದಯವಿಟ್ಟು ಎಲ್ಲರೂ ಸಹಕರಿಸಿ, ಕೋಲೆಕಾಡಿ ಸಹಾಯಹಸ್ತ ಗ್ರೂಪಿಗೆ ಸೇರಿ ನೆರವಾಗಬೇಕಾಗಿ ಮಗದೊಮ್ಮೆ ವಿನಂತಿಸುತ್ತಿದ್ದೇವೆ. ಈ ಗ್ರೂಪಿಗೆ ಸೇರುವವರು ಕೆಳಗಿನ ಈ ಲಿಂಕನ್ನು ಉಪಯೋಗಿಸಿ – https://chat.whatsapp.com/Kt9pkcU3qCDFaF6ZbmbIDR

***ಗಣೇಶ್ ಕೋಲೆಕಾಡಿಯವರ ಸಮಸ್ತ ಶಿಷ್ಯಂದಿರು***

# ಯಕ್ಷಾವ್ಯಾಸಂ ವಾರ್ಷಿಕೋತ್ಸವ

ಯಕ್ಷಾವ್ಯಾಸಂ ಕಾರಿಂಜ ಇದರ ತೃತೀಯ ವಾರ್ಷಿಕೋತ್ಸವ ನವಂಬರ್ 5 ರಂದು ವಗ್ಗ ಕಾಡಬೆಟ್ಟುವಿನ ಶಾರದಾಂಬ ಭಜನಾ ಮಂದಿರದಲ್ಲಿ ಜರುಗಲಿದೆ. ಕಾರ್ಯಕ್ರಮವನ್ನು ಮಾಜಿ ಸಚಿವರಾದ ರಮಾನಾಥ ರೈಯವರು ಉದ್ಘಾಟಿಸಲಿದ್ದು ಶಾಸಕ ರಾಜೇಶ್ ನಾಯಕ್ ಉಳಿಪಾಡಿಗುತ್ತು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಳಿಗ್ಗೆ 10. 30ಕ್ಕೆ ಯಕ್ಷಗಾನದ ಪೂರ್ವರಂಗ, ಹಾಗೂ ಸಂಸ್ಥೆಯ ಮಕ್ಕಳಿಂದ ಗಣಪತಿ ಕೌತುಕ ಎಂಬ ಮಕ್ಕಳ ಯಕ್ಷಗಾನ ಪ್ರದರ್ಶನ ನಡೆಯಲಿದೆ. ಸಭಾ ಕಾರ್ಯಕ್ರಮದಲ್ಲಿ ಯಕ್ಷಗಾನ ಛಂದಸರಾದ ಶ್ರೀ ಗಣೇಶ್ ಕೊಲೆಕಾಡಿಯವರಿಗೆ ಯಕ್ಷವ್ಯಾಸಂ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದರೊಂದಿಗೆ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಪುರಸ್ಕಾರವೂ ನಡೆಯಲಿದೆ. ಸಂಜೆ 6ರಿಂದ ಅತಿಕಾಯ ಇಂದ್ರಜಿತು ಎಂಬ ಪ್ರಸಂಗದ ಪ್ರದರ್ಶನವಿದ್ದು ಜಿಲ್ಲೆಯ ಪ್ರಸಿದ್ಧ ಹವ್ಯಾಸಿ ಕಲಾವಿದರು ಭಾಗವಹಿಸಲಿದ್ದಾರೆ.

